ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಸಂಪುಟ : 5 । ಸಂಚಿಕೆ : 7 । ಜುಲೈ - 2023 । ಪುಟಗಳು : 20 । ಬೆಲೆ : 25/-

## ಬೆಂಗಳೂರಿನಲ್ಲಿ "ಸಹಕಾರ ಸಮೃದ್ಧಿ ಸೌಧ"

## ಕಟ್ಟಡದ ಶಂಕುಸ್ಥಾಪನೆ-ಮುಖ್ಯಮಂತ್ರಿ ಅವರಿಂದ ಚಾಲನೆ



## ಸಹಕಾರ ಸಚಿವರಿಂದ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ





ನೂತನ ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ವತಿಯಿಂದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರಪ್ರಸಾದ್ ಗೌಡ, ನಿರ್ದೇಶಕರುಗಳಾದ ಡಾ.ಬಿ.ಡಿ.ಭೂಕಾಂತ, ಕೆ.ಕೃಷ್ಣಮೂರ್ತಿ ಹಾಗು ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಆಶಾಲತಾ ಪಿ. ಅವರುಗಳು ಸನ್ಮಾನಿಸಿ ಅಭಿನಂದಿಸಿ ಶುಭ ಕೋರಿದರು.



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಸಿ.ಎಂ. ಮಾರೇಗೌಡರವರು ರಾಜ್ಯ ಒಕ್ಕಲಿಗರ ಸಂಘದ ನೂತನ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ.



ನೂತನ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣರವರನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶೇಖರಗೌಡ ಮಾಲಿಪಾಟೀಲ, ವಿ. ರಾಜು, ಡಾ. ಸಂಜಯ ಪಿ. ಹೊಸಮಠ, ತಮ್ಮಣ್ಣ ಬಾಲಪ್ಪ, ಕೆಂಚರೆಡ್ಡಿ, ಹೊನ್ನಯ್ಯ ವೀ ಹಿರೇಮಠ, ರವೀಂದ್ರ ಪ್ರಲ್ಹಾದ ಕಲಬುರ್ಗಿರವರುಗಳು ಭೇಟಿಮಾಡಿ ಅಭಿನಂದಿಸಿದರು.

# ಸಹಕಾರ ವಲಯದಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ : ಏರಿಯಲ್ ಗೋರ್ಕೋ



ಜುಲೈ 1, ಅಂತಾರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆಯ ಅಧ್ಯಕ್ಷರಾದ ಏರಿಯಲ್ ಗೋರ್ಕೋ ಅವರು ಸಹಕಾರಿಗಳಿಗೆ ಸಂದೇಶವನ್ನು ನೀಡಿದ್ದಾರೆ. 1995 ರಿಂದ ವಿಶ್ವಸಂಸ್ಥೆಯು ಅಧಿಕೃತವಾಗಿ ಅಂತಾರಾಷ್ಟ್ರೀಯ ಸಹಕಾರ ದಿನವನ್ನು ಘೋಷಣೆ ಮಾಡಿತು. ಅಂದಿನಿಂದ ಪ್ರತಿ ವರ್ಷ ಅಂತಾರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸಲಾಗುತ್ತಿದೆ. ಈ ವರ್ಷ ಸುಸ್ಥಿರ ಅಭಿವೃದ್ದಿಗಾಗಿ ಸಹಕಾರ ಸಂಸ್ಥೆಗಳು ಎಂಬ ಘೋಷವಾಕ್ಯದೊಂದಿಗೆ ಆಚರಸುತ್ತಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಸಹಕಾರ ವಲಯ ಸಮುದಾಯ ಆಧಾರಿತ ಬೆಳವಣಿಗೆಗೆ ಪೂರಕವಾಗಿದ್ದು, ಆರ್ಥಿಕ ಬೆಳವಣಿಗೆ ಹಾಗು ಸುಸ್ಥಿರ ಅಭಿವೃದ್ದಿಯ ಜೊತೆಗೆ ಸಮಾನವಾದ, ಶಾಂತಿಯುತವಾದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು ಈ ಕುರಿತು ಸಹಕಾರಿಗಳೆಲ್ಲರೂ ಸಹಕಾರ ದಿನವನ್ನು ಉತ್ತಮ ವೇದಿಕೆಯಾಗಿ ಮಾಡಿಕೊಳ್ಳುವ ಮೂಲಕ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕ ಕೆಲಸ ಮಾಡುವಂತೆ ಶುಭ ಕೋರಿದರು.

ಮುಂದುವರೆದು ಮಾತನಾಡಿದ ಅವರು ಸಹಕಾರ ಸಂಸ್ಥೆಗಳು ಸ್ವಭಾವತಹ ಸಾಮಾಜಿಕ ಹಾಗು ಆರ್ಥಿಕ ಬೆಳವಣಿಗೆಯ ಪ್ರತಿನಿಧಿಗಳಂತೆ ಕೆಲಸ ನಿರ್ವಹಿಸುತ್ತಿವೆ. ಹಾಗೆಯೆ ತತ್ವಾಧರಿತವಾದ, ಮೌಲ್ಯಗಳನ್ನೊಳಗೊಂಡು ಕೆಲಸ ನಿರ್ವಹಿಸುವುದರಿಂದ ಎಲ್ಲವನ್ನು ಸಾಧಿಸಲು ಸಾಧ್ಯವಿದೆ ಎಂದು ಅವರು ತಿಳಿಸಿದರು.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ-ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org


## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2022-2024

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ


ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

**ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ವರ್ಷ ಜುಲೈ ತಿಂಗಳ ಮೊದಲನೇಯ ಶನಿವಾರದಂದು 'ಅಂತಾರಾಷ್ಟ್ರೀಯ ಸಹಕಾರ ದಿನ'ವನ್ನು ಆಚರಿಸಲಾಗುತ್ತಿದ್ದು, ರಾಷ್ಟ್ರೀಯ ಸಹಕಾರ ಯೂನಿಯನ್ ನೇತೃತ್ವದಲ್ಲಿ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 17ನೇ ರಾಷ್ಟ್ರೀಯ ಸಹಕಾರ ಕಾಂಗ್ರೆಸ್ ಉದ್ಘಾಟಿಸಿ ಭಾಷಣ ಮಾಡಲಿದ್ದಾರೆ.**

# ಜುಲೈ 1 – ಅಂತಾರಾಷ್ಟ್ರೀಯ ಸಹಕಾರ ದಿನ




ಸಹಕಾರ ಚಳುವಳಿ ಇಂದು ವಿಶ್ವವ್ಯಾಪಿ ಹರಡಿದೆ. ವಿಶ್ವದಲ್ಲಿ 100 ಕೋಟಿಗೂ ಅಧಿಕ ಜನರು ಸಹಕಾರ ಚಳುವಳಿಯಲ್ಲಿ ತೊಡಗಿಸಿಕೊಂಡು ಪ್ರಯೋಜನ ಪಡೆಯುತ್ತಿದ್ದಾರೆ. ಭಾರತದ ಸಹಕಾರ ಚಳುವಳಿ 118 ವರ್ಷಗಳ ಧೀರ್ಘಕಾಲದ್ದು. 30 ಕೋಟಿಗೂ ಅಧಿಕ ಸದಸ್ಯ ಬಳಗದ ಮೂಲಕ ವಿಶ್ವದಲ್ಲಿಯೇ ಬೃಹತ್ ಚಳುವಳಿಯಾಗಿ ಮುನ್ನಡೆಯುತ್ತಿರುವುದು ನಮ್ಮೆಲ್ಲರ ಹೆಮ್ಮೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ವರ್ಷ ಜುಲೈ ತಿಂಗಳ ಮೊದಲನೇಯ ಶನಿವಾರದಂದು 'ಅಂತಾರಾಷ್ಟ್ರೀಯ ಸಹಕಾರ ದಿನ'ವನ್ನು ಆಚರಿಸಲಾಗುತ್ತಿದ್ದು, ರಾಷ್ಟ್ರೀಯ ಸಹಕಾರ ಯೂನಿಯನ್ ನೇತೃತ್ವದಲ್ಲಿ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 17ನೇ ರಾಷ್ಟ್ರೀಯ ಸಹಕಾರ ಕಾಂಗ್ರೆಸ್ ಉದ್ಘಾಟಿಸಿ ಭಾಷಣ ಮಾಡಲಿದ್ದಾರೆ.

ಈ ವರ್ಷದ ಆಚರಣೆಯ ಧ್ಯೇಯ ವಾಕ್ಯ 'ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು' ಎಂಬುದಾಗಿದೆ. ಇಂದು ಭಾರತ ಜನಸಂಖ್ಯೆಯಲ್ಲಿ ವಿಶ್ವದಲ್ಲಿ ಮೊದಲ ಸ್ಥಾನದಲ್ಲಿದೆ. ಜನಸಂಖ್ಯೆ ಹೆಚ್ಚಿದಂತೆಲ್ಲಾ ಸಹಕಾರಿ ಸದಸ್ಯರುಗಳಿಗೆ ಸೌಲಭ್ಯಗಳನ್ನು ವಿಸ್ತರಿಸಲು ಸಹಕಾರ ಸಂಘಗಳು ಮತ್ತಷ್ಟು ಕ್ರಿಯಾಶೀಲವಾಗಬೇಕಿದೆ.

2023ರ ವೇಳೆಗೆ ವಿಶ್ವವು ಸುಸ್ಥಿರ ಅಭಿವೃದ್ಧಿ ಸಾಧಿಸಿ ಮುಂದಿನ ಪೀಳಿಗೆಗೆ ಭೂಮಿಯ ಮೇಲೆ ವಾಸಿಸಲು ಉತ್ತಮ ಪರಿಸರ ನಿರ್ಮಾಣ ಮಾಡಬೇಕಿದೆ. ಆದ್ದರಿಂದ ಸಂಪನ್ಮೂಲಗಳ ಬಳಕೆ, ಪಳೆಯುಳಿಕೆ ಇಂಧನ ಬಳಕೆ ಕಡಿಮೆಗೊಳಿಸಿ ಸೌರಶಕ್ತಿ ಬಳಕೆಯಿಂದ ಹಸಿರು ಮನೆ ಪರಿಣಾಮಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು ಸಮಾಜದ ಉನ್ನತಿಗಾಗಿ, ಸಹಕಾರಿ ಸದಸ್ಯರ ಅಭಿವೃದ್ಧಿಗಾಗಿ ಕಂಕಣಬದ್ಧರಾಗಿ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡಬೇಕಾದ ಅನಿವಾರ್ಯತೆ ಇದೆ. ಸದಸ್ಯರಿಗೆ ಆರೋಗ್ಯ ವಿಮೆ ಸೇರಿದಂತೆ ಸದಸ್ಯ ಸ್ನೇಹಿಯಾಗಿ ಬಹುಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮುನ್ನಡೆಯಲು ವಲಯವಾರು ಯೋಜನೆಗಳನ್ನು ಅಳವಡಿಕೊಳ್ಳಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ.

ಸಹಕಾರದ ಏಳು ತತ್ವಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಸಹಕಾರಿಗಳು ಚಿಂತನ ಮಂತನ ನಡೆಸಲು ಇಂತಹ ದಿನಾಚರಣೆಗಳು ಪೂರಕವಾಗಿವೆ. ಎಲ್ಲಾ ಸಹಕಾರಿ ಬಂಧುಗಳಿಗೆ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯ ಶುಭಾಷಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಆರ್‌ಬಿಐ ನಿಂದ ಶೀಘ್ರವೇ ಹೊಸ ಡಿಜಿಟಲ್ ಪಾವತಿ ಸೇವೆ




**ದೆಹಲಿ :** ಆರ್‌ಬಿಐ ಹೊಸ ಪಾವತಿ ಸೇವೆಗಳನ್ನು ನೀಡಲು ಮುಂದಾಗಿದ್ದು, ಇದಕ್ಕೆ ಅಗತ್ಯವಿರುವ ತಯಾರಿ ನಡೆಸುತ್ತಿದೆ. ಈಗಾಗಲೇ ಅಸ್ತಿತ್ವದಲ್ಲಿರುವ UPI, NEFT, RTGS ಸೇವೆಗಳನ್ನು ಬಳಸಲು ನೆಟ್‌ವರ್ಕ್ ಮತ್ತು IT ಸೌಲಭ್ಯಗಳು ಕಡ್ಡಾಯವಾಗಿದೆ.

ಆದರೆ ನೈಸರ್ಗಿಕ ವಿಪತ್ತು, ಯುದ್ಧ ಹಾಗೂ ಮುಂತಾದ ತುರ್ತುಪರಿಸ್ಥಿತಿಯ ಸಂದರ್ಭಗಳು ನೆಟ್‌ವರ್ಕ್ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ ಇಂತಹ ಸಂದರ್ಭದಲ್ಲಿ ಜನರಿಗೆ ಅನುಕೂಲವಾಗಲೆಂದು ಆರ್‌ಬಿಐ ಲೈಟ್‌ವೇಟ್ ಪೇಮೆಂಟ್ ಮತ್ತು ಸೆಟಲ್‌ಮೆಂಟ್ ಸಿಸ್ಟಮ್ (LPSS) ಎಂಬ ನೂತನ ತಂತ್ರಜ್ಞಾನವನ್ನು ತರಲು ಮುಂದಾಗಿದೆ.

ಇದು ನೈಸರ್ಗಿಕ ವಿಪತ್ತುಗಳು ಅಥವಾ ಯುದ್ಧದಂತಹ ತುರ್ತು ಪರಿಸ್ಥಿತಿಗಳಲ್ಲಿ ಎಲ್ಲಿಂದಲಾದರೂ ಕಾರ್ಯನಿರ್ವಹಿಸುತ್ತದೆ. ಈ ವ್ಯವಸ್ಥೆಯು ಸಾರ್ವಜನಿಕ ವಿಶ್ವಾಸವನ್ನು ಹೆಚ್ಚಿಸುವುದರ ಜತೆಗೆ ಅಗತ್ಯಕ್ಕೆ ತಕ್ಕಂತೆ ಸಕ್ರಿಯಗೊಳಿಸುವ ವಿನ್ಯಾಸವನ್ನು ಒಳಗೊಂಡಿದೆ ಎನ್ನಲಾಗಿದೆ.

**ಸುಭಾಷಿತ :** ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರಗಳ ತಂತಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸು ಕೂಡಲ ಸಂಗಮದೇವ! – ಬಸವಣ್ಣ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

ಸಹಕಾರ

# ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ "ಸಹಕಾರ ಸಮೃದ್ಧಿ ಸೌಧ" ಕಟ್ಟಡ ಗುದ್ದಲಿ ಪೂಜೆ ಚಾಲನೆ




**ಬೆಂಗಳೂರು :** ಸಹಕಾರ ಇಲಾಖೆಯ ಕಾರ್ಯನಿರ್ವಹಣೆ ಉತ್ತಮಗೊಳಿಸುವ ಸಲುವಾಗಿ ಅಲಿ ಅಸ್ಕರ್ ರಸ್ತೆಯಲ್ಲಿನ ಸಹಕಾರ ಸಂಘಗಳ ನಿಬಂಧಕರ ಕಚೇರಿ ಆವರಣದಲ್ಲಿ 'ಸಹಕಾರ ಸಮೃದ್ಧಿ ಸೌಧ' ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕು ಸ್ಥಾಪನೆ ನೆರವೇರಿಸಿ ಕಟ್ಟಡ ನಿರ್ಮಾಣ ಕಾರ್ಯ ಶೀಘ್ರ ನಿರ್ಮಾಣ ಆರಂಭಗೊಂಡು ಜನಸೇವೆಗೆ ಲಭ್ಯವಾಗಲಿ ಎಂದು ಶುಭಹಾರೈಸಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿ ಆವರಣದಲ್ಲಿನ 7 ಸಾವಿರ ಚದರ ಅಡಿ ವಿಸ್ತೀರ್ಣದ ಪ್ರದೇಶದಲ್ಲಿ 15 ಕೋಟಿ ರೂ. ವೆಚ್ಚದಲ್ಲಿ ನೂತನ ಸಹಕಾರ ಸಮೃದ್ಧಿ ಸೌಧ ನಿರ್ಮಿಸಲಾಗುತ್ತಿದೆ. ಮೊದಲ ಹಂತದಲ್ಲಿ 9.85 ಕೋಟಿ ರೂ. ವೆಚ್ಚದಲ್ಲಿ 3 ಹಂತದ ಕಟ್ಟಡ ನಿರ್ಮಾಣ ಹಾಗೂ ಉಳಿದ 5.15 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ವಿನ್ಯಾಸ ಮಾಡಲಾಗುತ್ತದೆ. ಕಟ್ಟಡದಲ್ಲಿ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಎಲ್ಲ ಶಾಖೆಗಳಿಗೆ ಅಗತ್ಯವಿರುವ ಕೋರ್ಟ್ ಹಾಲ್, ವರ್ಕ್ ಸ್ಟೇಷನ್ಸ್, ಮೀಟಿಂಗ್ ಹಾಲ್, ದಾಖಲೆ ಕೊಠಡಿ, ವಾಹನ ನಿಲುಗಡೆ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.

ಸಹಕಾರ ಸಮೃದ್ಧಿ ಸೌಧದ ನಿರ್ಮಾಣಕ್ಕೆ ಅಗತ್ಯವಿರುವ ಅನುದಾನವನ್ನು ಸಹಕಾರ ಇಲಾಖೆಯ ಸಹಕಾರ ಅಭಿವೃದ್ಧಿ ನಿಧಿಯಿಂದ ಒದಗಿಸಲು ಸರ್ಕಾರ ಅನುಮೋದನೆ ನೀಡಿದೆ. ಕರ್ನಾಟಕ ಗೃಹ ಮಂಡಳಿಯು ಕಟ್ಟಡ ನಿರ್ಮಾಣ ಮಾಡಲಿದೆ.

ಶಂಕು ಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವರಾದ ಕೆ.ಎನ್. ರಾಜಣ್ಣ, ಎಚ್.ಕೆ. ಪಾಟೀಲ್, ಬಿ.ಝಡ್. ಜಮೀರ್ ಅಹಮದ್ ಖಾನ್, ಶಿವಾನಂದ ಪಾಟೀಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



## ಸಹಕಾರ ಇಲಾಖೆಯ ಅಧಿಕಾರಿಗಳ ಪ್ರಗತಿಪರಿಶೀಲನಾ ಸಭೆ

# ಸಹಕಾರ ಬ್ಯಾಂಕುಗಳಲ್ಲಿನ ತಾಂತ್ರಿಕ ಲೋಪದೋಷಗಳನ್ನು ಪರಿಹರಿಸಿಕೊಳ್ಳಲು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೂಚನ



**ಬೆಂಗಳೂರು :** ಸಹಕಾರ ಇಲಾಖೆಯ ರಾಜ್ಯಮಟ್ಟದ ಪ್ರಗತಿಪರಿಶೀಲನಾ ಸಭೆಯು ದಿನಾಂಕ : 16.6.2023 ರಂದು ಅಪೆಕ್ಸ್ ಬ್ಯಾಂಕಿನ ಸಭಾಂಗಣದಲ್ಲಿ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಚಿವರು ಎಲ್ಲಾ ಡಿಸಿಸಿ ಬ್ಯಾಂಕುಗಳ ಪ್ರಗತಿಯನ್ನು ಪರಿಶೀಲಿಸಿ, ಬ್ಯಾಂಕುಗಳಲ್ಲಿನ ಸಾಫ್ಟ್‌ವೇರ್ ತಾಂತ್ರಿಕ ಲೋಪದೋಷಗಳನ್ನು ಶೀಘ್ರವಾಗಿ ಪರಿಹರಿಸಿಕೊಳ್ಳುವ ಮೂಲಕ ಬ್ಯಾಂಕುಗಳ ಪ್ರಗತಿಗೆ ಕ್ರಮವಿಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬ್ಯಾಂಕುಗಳಲ್ಲಿ ಯಾವುದೇ ರೀತಿಯ ಸಮಸ್ಯೆಗಳಿದ್ದರೂ ಸೂಕ್ತ ಸಂದರ್ಭದಲ್ಲಿ ಗಮನಕ್ಕೆ ತಂದು ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಂತೆ ತಿಳಿಸಿದರು.

ಸಹಕಾರ ಸಂಘಗಳ ಮೂಲಕ ನೀಡುತ್ತಿರುವ ಕೃಷಿ ಸಾಲವನ್ನು ರೂ. 3 ಲಕ್ಷದಿಂದ ರೂ. 5 ಲಕ್ಷದವರೆಗೆ ಏರಿಕೆ ಮಾಡಲು ಸರ್ಕಾರ ಚಿಂತನೆ ಮಾಡುತ್ತಿದೆ. ಸಣ್ಣ, ಅತಿ ಸಣ್ಣ, ಮಧ್ಯಮವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಮತ್ತು ಮಹಿಳೆಯರಿಗೆ ಸಾಲವನ್ನು ಆದ್ಯತೆಯ ಮೇರೆಗೆ ನೀಡುವಂತೆ ಸೂಚನೆ ನೀಡಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಬಲವರ್ಧನೆಗಾಗಿ ಹಾಗೂ ಪಂಚಾಯಿತಿಗೆ ಒಂದು ಪ್ಯಾಕ್ಸ್ ಸ್ಥಾಪನೆ ಕುರಿತು ಅಧಿಕಾರಿಗಳು ಕ್ರಮವಿಡಲು ಅವರು ತಿಳಿಸಿದರು.

ಸಹಕಾರ ಸಂಸ್ಥೆಗಳ ಅವ್ಯವಹಾರ ನಡೆಸಿದವರ ವಿರುದ್ಧ ಕಾನೂನಿನಲ್ಲಿ ಇರುವ ರಿಕವರಿ ಅವಕಾಶಗಳ ಕುರಿತು ಹಾಗೂ ಡಿಸಿಸಿ ಬ್ಯಾಂಕುಗಳಲ್ಲಿ ಅಳವಡಿಸಿ ಕೊಳ್ಳಬೇಕಾದ ಸಾಫ್ಟ್‌ವೇರ್ ತಾಂತ್ರಿಕ ಅಗತ್ಯಗಳ ಬಗ್ಗೆ ವಿಭಾಗವಾರು ತರಬೇತಿ ವ್ಯವಸ್ಥೆಯನ್ನು ಮಾಡುವಂತೆ ಹಿರಿಯ ಅಧಿಕಾರಿಗಳಿಗೆ ತಿಳಿಸಿದರು. ಸರ್ಕಾರ ಪ್ರಧಾನ ಕಾರ್ಯದರ್ಶಿಗಳಾದ ಮಂಜುನಾಥ್ ಪ್ರಸಾದ್ ರವರು ಮಾತನಾಡಿ, ಇತ್ತೀಚೆಗೆ ಬ್ಯಾಂಕುಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಕುರಿತಂತೆ ಕಾನೂನಿನಲ್ಲಿ ಬದಲಾವಣೆಗಳನ್ನು ತರುವ ಮೂಲಕ ಅವುಗಳಿಗೆ ಕಡಿವಾಣ ಹಾಕಲು ಹಾಗೂ ಅವ್ಯವಹಾರಗಳಲ್ಲಿ ಭಾಗಿಯಾದವರನ್ನು ಶಿಕ್ಷಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ಮಾಡಿದರು.

ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ಮಾತನಾಡಿ, ಸಹಕಾರ ಇಲಾಖೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಮಾಪನೆಗೊಂಡ ಸಹಕಾರ ಸಂಘಗಳ ಆಸ್ತಿಗಳನ್ನು ಸಹಕಾರ ಸಂಘಗಳ ನಿಬಂಧಕರ ಹೆಸರಿಗೆ ವರ್ಗಾವಣೆ ಮಾಡಲು ಸೂಚನೆ ನೀಡಿದರು. ಸಹಕಾರ ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಗಮನಹರಿಸಲು ತಿಳಿಸಿದರು. ಸಭೆಯಲ್ಲಿ ಅಪರ ನಿಬಂಧಕರಾದ ಕೆ.ಎಂ. ಆಶಾ ಅವರು ಸಹಕಾರ ಇಲಾಖೆಯ ವಲಯವಾರು ವಿಷಯಗಳ ಕುರಿತು ಸಂಪೂರ್ಣವಾದ ಮಾಹಿತಿಯನ್ನು ಸಚಿವರ ಗಮನಕ್ಕೆ ತಂದರು. ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಪರ ನಿಬಂಧಕರುಗಳಾದ ಪ್ರಕಾಶ ರಾವ್, ಕೆ.ಎಸ್. ನವೀನ್, ವೈ.ಹೆಚ್. ಗೋಪಾಲಕೃಷ್ಣ, ಎ.ಸಿ. ದಿವಾಕರ್, ಆರ್. ಶ್ರೀಧರ್, ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಸ್.ಪಿ. ಬೂದನೂರು, ಸಹಕಾರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎಂ.ಡಿ. ನರಸಿಂಹಮೂರ್ತಿ, ಸಚಿವರ ಆಪ್ತ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳು, ಜಿಲ್ಲಾ ಉಪನಿಬಂಧಕರುಗಳು ಉಪಸ್ಥಿತರಿದ್ದರು.



# ರೈತರಿಗೆ ರೂ. 5 ಲಕ್ಷ ಶೂನ್ಯ ಬಡ್ಡಿ ದರದಲ್ಲಿ ಸಾಲ : ಕೆ.ಎನ್. ರಾಜಣ್ಣ



**ಬೆಂಗಳೂರು** : ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ನೀಡುವ ಸಾಲದ ಮೊತ್ತವನ್ನು ರೂ. 5 ಲಕ್ಷ ರೂಪಾಯಿಗೆ ಹೆಚ್ಚಳ ಮಾಡಲಾಗುವುದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೂನ್ಯ ಬಡ್ಡಿ ದರ ಸಾಲವನ್ನು ಮೂರು ಲಕ್ಷ ರೂ.ನಿಂದ ಐದು ಲಕ್ಷ ರೂ.ಗೆ ಹೆಚ್ಚಳ ಮಾಡುವುದಾಗಿ ಭರವಸೆ ನೀಡಲಾಗಿತ್ತು. ಅದೇ ರೀತಿ ಶೇಕಡ ಮೂರರ ಬಡ್ಡಿ ದರದಲ್ಲಿ ನೀಡುವ ಮಧ್ಯಮಾವಧಿ ಸಾಲದ ಮೊತ್ತವನ್ನು 10 ಲಕ್ಷ ರೂ.ನಿಂದ 20 ಲಕ್ಷ ರೂಪಾಯಿಗೆ ಹೆಚ್ಚಳ ಮಾಡಲು ಭರವಸೆ ನೀಡಲಾಗಿದ್ದು, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿಯೇ ಇದನ್ನು ಜಾರಿಗೊಳಿಸಿ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಲಾಗುವುದು ಎಂದು ಹೇಳಿದ್ದಾರೆ.

ರೈತರಿಗೆ ಗುರಿ ಮೀರಿ ಸಾಲ ನೀಡಲಾಗುತ್ತಿದೆ. ಕಳೆದ ವರ್ಷ 12,000 ಕೋಟಿ ರೂ. ಸಾಲ ನೀಡುವ ಗುರಿ ಹೊಂದಿದ್ದು, ಸುಮಾರು 20 ಸಾವಿರ ಕೋಟಿ ರೂಪಾಯಿ ಸಾಲ ವಿತರಣೆ ಮಾಡಲಾಗಿದೆ. ಅದೇ ರೀತಿ ಈ ವರ್ಷವೂ ರೈತರಿಗೆ ಯಾವುದೇ ತೊಂದರೆಯಾಗದಂತೆ ಸಾಲ ವಿತರಿಸಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ.

ರೈತರಿಗೆ 50,000 ರೂ. 1 ಲಕ್ಷ ರೂ.ವರೆಗಿನ ಸಾಲ ಮನ್ನಾ ಮಾಡುವ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಈ ಬಗ್ಗೆ ಶೀಘ್ರವೇ ಸಭೆ ನಡೆಸಿ ಸಾಲ ಮನ್ನಾ ಸಮರ್ಪಕ ಜಾರಿಗೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

## ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಿಗೆ "ಐಐಬಿ ಬೆಸ್ಟ್ ಬುಸಿನೆಸ್ ಲೀಡರ್‌ಶಿಪ್ ಅವಾರ್ಡ್ –2023" ಪ್ರಶಸ್ತಿ




ಐಕಾನ್ಸ್ ಆಫ್ ಇಂಡಿಯನ್ ಬುಸಿನೆಸ್ ಮ್ಯಾಗಸಿನ್ ನೀಡುತ್ತಿರುವ ಕರ್ನಾಟಕ ಗ್ಲೋರಿ ಅವಾರ್ಡ್ಸ್ – 2023, ಪ್ರಶಸ್ತಿ ಪ್ರಧಾನ ಸಮಾರಂಭವು ಬೆಂಗಳೂರಿನ ಗಾಂಧಿನಗರದಲ್ಲಿ ನಡೆಯಿತು. ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸಾಧನೆಗಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಚಿತ್ತರಂಜನ್ ಬೋಳಾರ್‌ರವರಿಗೆ ಸೂಕ್ಷ, ಇಲೆಕ್ಟ್ರೋನಿಕ್ಸ್ ಸಿಸ್ಟಮ್ಸ್ ವಿನ್ಯಾಸ ಮತ್ತು ಉತ್ಪಾದನೆ ಹಾಗೂ ಮಾಹಿತಿ ತಂತ್ರಜ್ಞಾನದ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ ಭಾರತೀಯ ಒಕ್ಕೂಟದ ಮಹಾನಿರ್ದೇಶಕರು ಮತ್ತು ಸಂಸ್ಥಾಪಕರಾದ ಶ್ರೀ ಜೈರಾಜ್ ಶ್ರೀನಿವಾಸ್‌ರವರು ಅತಿಥಿ ಗಣ್ಯರ ಉಪಸ್ಥಿತಿಯಲ್ಲಿ "ಐಐಬಿ ಬೆಸ್ಟ್ ಬುಸಿನೆಸ್ ಲೀಡರ್‌ಶಿಪ್ ಅವಾರ್ಡ್–2023 ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಚಿತ್ತರಂಜನ್ ಬೋಳಾರ್ ರವರು ಸಹಕಾರ ಕ್ಷೇತ್ರದ ಜೊತೆಗೆ ಸಾಮಾಜಿಕ, ಧಾರ್ಮಿಕ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸಲ್ಲಿಸಿದ ಅನನ್ಯ ಸೇವೆಗೆ ಅನೇಕ ರಾಷ್ಟ್ರೀಯ, ರಾಜ್ಯ ಮಟ್ಟದ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ಇವರಿಗೆ 2016ರಲ್ಲಿ 63ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಉತ್ತಮ ಸಹಕಾರಿ ಪ್ರಶಸ್ತಿ, ರಾಷ್ಟ್ರೀಯ "ಬಸವಶ್ರೀ ಪ್ರಶಸ್ತಿ, ಸಮಾಜ ರತ್ನ ಪ್ರಶಸ್ತಿ, ಪರಿವರ್ತನಶ್ರೀ ರಾಜ್ಯ ಪ್ರಶಸ್ತಿ, ಭಾರತ ರತ್ನ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ, "ಸಹಕಾರ ರತ್ನ ಪ್ರಶಸ್ತಿ" ಜೊತೆಯಲ್ಲಿ ಸಂಘ –ಸಂಸ್ಥೆಗಳಲ್ಲಿ ಸಕ್ರಿಯವಾಗಿರುವ ಇವರನ್ನು ಹಲವಾರು ಸಹಕಾರ ಸಂಘ– ಸಂಸ್ಥೆಗಳು ಗುರುತಿಸಿ ಸನ್ಮಾನಿಸಿದೆ. ಪ್ರಸ್ತುತ "ಐಐಬಿ ಬೆಸ್ಟ್ ಬುಸಿನೆಸ್ ಲೀಡರ್‌ಶಿಪ್ ಅವಾರ್ಡ್–2023" ಪ್ರಶಸ್ತಿ ಇವರ ಸಾಧನೆಯ ಹಿರಿಮೆಯನ್ನು ಇನ್ನಷ್ಟು ಹೆಚ್ಚಿಸಿದೆ.

# ಪಟ್ಟಣ ಸಹಕಾರ ಬ್ಯಾಂಕುಗಳ ವಲಯಕ್ಕೆ ಪ್ರಧಾನಿ ಮೋದಿ ಬೆಂಬಲ : ಗೃಹ ಸಚಿವ ಅಮಿತ್ ಶಾ ಅಭಿನಂದನೆ ಸಲ್ಲಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ ಪ್ರಮುಖ ನೀತಿ ನಿರ್ಧಾರಗಳು ನಗರ ಸಹಕಾರಿ ಬ್ಯಾಂಕುಗಳ ಸಾಮರ್ಥ್ಯವನ್ನು ಹೆಚ್ಚಿಸಿವೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ಇದು ಸಹಕಾರಿ ಕ್ಷೇತ್ರಕ್ಕೆ ಬಲ ನೀಡಿದಂತಾಗಿದೆ ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಕಾರಣವಾಗಿದೆ" ಎಂದು ಟ್ವೀಟ್ ಮಾಡಿದ್ದಾರೆ.

ಈ ಕುರಿತು ಟ್ವೀಟ್‌ನಲ್ಲಿ ಅಮಿತ್ ಶಾ ಅವರು ಪ್ರಧಾನಿಗೆ ಧನ್ಯವಾದ ಅರ್ಪಿಸಿದ್ದಾರೆ. "ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಹಕಾರಿಗಳನ್ನು ಬಲಪಡಿಸಲು ಮತ್ತು ಇತರ ಆರ್ಥಿಕ ಘಟಕಗಳೊಂದಿಗೆ ಸಮಾನವಾಗಿ ಪರಿಗಣಿಸಲು ಬದ್ಧವಾಗಿದೆ" ಎಂದು ಹೇಳಿದ್ದಾರೆ.

ಮತ್ತೊಂದು ಟ್ವೀಟ್‌ನಲ್ಲಿ ಅಮಿತ್ ಶಾ ನೇತೃತ್ವದ ಸಹಕಾರ ಸಚಿವಾಲಯವು "ಪ್ರಧಾನಿ ನರೇಂದ್ರ ಮೋದಿ ಅವರ ಸಹಕಾರ್ ಸೇ ಸಮೃದ್ಧಿಯ ದೃಷ್ಟಿಕೋನವನ್ನು ಸಾಕಾರಗೊಳಿಸಲು, ದೇಶದಲ್ಲಿ 1,514 ನಗರ ಸಹಕಾರಿ ಬ್ಯಾಂಕ್‌ಗಳನ್ನು (ಯುಸಿಬಿ) ಬಲಪಡಿಸಲು ನಾಲ್ಕು ಪ್ರಮುಖ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ" ಎಂದು ತಿಳಿಸಿದ್ದಾರೆ.



ಈ ನಿರ್ಧಾರಗಳ ಹಿಂದಿನ ಬೆಳವಣಿಗೆಯ ಹಾದಿಯನ್ನು ವಿವರಿಸುತ್ತಾ, ಸಚಿವಾಲಯವು ವಾರ್ತಾ ಸಂಸ್ಥೆಗೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ವಿವರಿಸಿದ್ದು, ಕೇಂದ್ರ ಗೃಹ ಸಚಿವರು ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಹಣಕಾಸು ಸಚಿವರೊಂದಿಗೆ ನಡೆಸಿದ ವಿವರವಾದ ಚರ್ಚೆಗಳ ಪ್ರಕಾರ. ನಿರ್ಮಲಾ ಸೀತಾರಾಮನ್ ಮತ್ತು ಆರ್‌ಬಿಐ ಗವರ್ನರ್, ಪಟ್ಟಣ ಸಹಕಾರಿ ಬ್ಯಾಂಕ್‌ಗಳನ್ನು ಬಲಪಡಿಸಲು ಈ ಪ್ರಮುಖ ಕ್ರಮಗಳನ್ನು ಸೂಚಿಸಿದೆ.

### 1. ತಮ್ಮ ವ್ಯವಹಾರವನ್ನು ವಿಸ್ತರಿಸುವ ಸಲುವಾಗಿ, ಪಟ್ಟಣ ಸಹಕಾರ ಬ್ಯಾಂಕುಗಳು ಈಗ ಹೊಸ ಶಾಖೆಗಳನ್ನು ತೆರೆಯಬಹುದು.

ಪಟ್ಟಣ ಸಹಕಾರ ಬ್ಯಾಂಕುಗಳು ಈಗ ತಮ್ಮ ಅನುಮೋದಿತ ಕಾರ್ಯಾಚರಣೆಯ ಪ್ರದೇಶದಲ್ಲಿ ಆರ್‌ಬಿಐನ ಪೂರ್ವಾನುಮತಿ ಇಲ್ಲದೆಯೇ ಹಿಂದಿನ ಹಣಕಾಸು ವರ್ಷದಲ್ಲಿ ಶಾಖೆಗಳ ಸಂಖ್ಯೆಯ 10% (ಗರಿಷ್ಠ 5 ಶಾಖೆಗಳು) ವರೆಗೆ ಹೊಸ ಶಾಖೆಗಳನ್ನು ತೆರೆಯಬಹುದು. ಈ ಸೌಲಭ್ಯವನ್ನು ಪಡೆಯಲು, ಸಹಕಾರ ಪಟ್ಟಣ ಬ್ಯಾಂಕುಗಳು ತಮ್ಮ ಮಂಡಳಿಯಿಂದ ಅನುಮೋದಿತ ನೀತಿಯನ್ನು ಪಡೆಯಬೇಕು ಮತ್ತು ಆರ್ಥಿಕವಾಗಿ ಉತ್ತಮ ಮತ್ತು ಉತ್ತಮವಾಗಿ ನಿರ್ವಹಿಸಲ್ಪಟ್ಟ **(FSWM)** ಮಾನದಂಡಗಳನ್ನು ಅನುಸರಿಸಬೇಕು.

### 2. ಪಟ್ಟಣ ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳಿಗೆ ಸಮಾನವಾಗಿ ಒನ್‌ಟೈಮ್ ಸೆಟಲ್‌ಮೆಂಟ್ ಅನ್ನು ಸಹ ಮಾಡಬಹುದಾಗಿದೆ.

ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ಗಳು ಸೇರಿದಂತೆ ಎಲ್ಲಾ ನಿಯಂತ್ರಿತ ಘಟಕಗಳಿಗೆ ಈ ಅಂಶವನ್ನು ನಿಯಂತ್ರಿಸುವ ಚೌಕಟ್ಟನ್ನು ಖಃಖ ಸೂಚಿಸಿದೆ. ಈಗ ಬೋರ್ಡ್–ಅನುಮೋದಿತ ನೀತಿಗಳ ಮೂಲಕ ಸಹಕಾರಿ ಬ್ಯಾಂಕ್‌ಗಳು ತಾಂತ್ರಿಕ ರೈಟ್–ಆಫ್ ಮತ್ತು ಸಾಲಗಾರರೊಂದಿಗೆ ಇತ್ಯರ್ಥಕ್ಕೆ ಪ್ರಕ್ರಿಯೆಯನ್ನು ಒದಗಿಸಬಹುದು. ಇದು ಸಹಕಾರಿ ಬ್ಯಾಂಕುಗಳನ್ನು ಇತರ ವಾಣಿಜ್ಯ ಬ್ಯಾಂಕುಗಳಿಗೆ ಸರಿಸಮಾನವಾಗಿ ತಂದಿದೆ.

### 3. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನೀಡಲಾದ ಆದ್ಯತಾ ವಲಯ ಗುರಿಗಳಿಗಾಗಿ ಪರಿಷ್ಕೃತ ಟೈಮ್‌ಲೈನ್‌ಗಳು

ರಿಸರ್ವ್ ಬ್ಯಾಂಕ್‌ಆಫ್‌ಇಂಡಿಯಾ ಯುಸಿಬಿಗಳಿಗೆ ಆದ್ಯತಾ ವಲಯದ ಸಾಲ (PSL) ಗುರಿಗಳನ್ನು ಸಾಧಿಸಲು ಎರಡು ವರ್ಷಗಳ ಕಾಲ ಅಂದರೆ ಮಾರ್ಚ್ 31, 2026ರವರೆಗೆ ಸಮಯವನ್ನು ವಿಸ್ತರಿಸಲು ನಿರ್ಧರಿಸಿದೆ. 60%ರ ಕಖಐ ಗುರಿಯನ್ನು ಸಾಧಿಸಲು ಮಾರ್ಚ್ 31, 2023ರ ಗಡುವನ್ನು ಈಗ ಮಾರ್ಚ್ 31,2024 ಕ್ಕೆ ವಿಸ್ತರಿಸಲಾಗಿದೆ. ಈಜ 2022–23 ರಅವಧಿಯಲ್ಲಿ ಕಖಐನ ಕೊರತೆಯನ್ನು ತೆರವುಗೊಳಿಸಿದ ನಂತರ ಹೆಚ್ಚುವರಿ ಠೇವಣಿಗಳನ್ನು ಸಹ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮರುಪಾವತಿಸಲಾಗುತ್ತದೆ. ಪಟ್ಟಣ ಸಹಕಾರ ಬ್ಯಾಂಕುಗಳು ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ವಾಣಿಜ್ಯ ಬ್ಯಾಂಕುಗಳಿಗಿಂತ ಭಿನ್ನವಾಗಿ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವುದರಿಂದ, ಅವರು ಈ ಸ್ಕೋರ್‌ನಲ್ಲಿ ಕಷ್ಟಗಳನ್ನು ಎದುರಿಸುತ್ತಿದ್ದಾರೆ.

### 4. ಆರ್‌ಬಿಐನಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸುವುದು

ನಿಕಟ ಸಮನ್ವಯ ಮತು ್ತಕೇಂದ್ರೀಕೃತ ಸಂವಾದಕ್ಕಾಗಿ ಸಹಕಾರಿ ಕ್ಷೇತ್ರದ ಬಹುಕಾಲದ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಆರ್‌ಬಿಐ ಇತ್ತೀಚೆಗೆ ನೋಡಲ್ ಅಧಿಕಾರಿಗೆ ಸೂಚನೆ ನೀಡಿದೆ.

ಮೇಲಿನ ಉಪಕ್ರಮಗಳು ನಗರ ಸಹಕಾರಿ ಬ್ಯಾಂಕ್‌ಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ, ಸಹಕಾರ ಸಚಿವಾಲಯವು ಸಹಕಾರಿಗಳನ್ನು ಬಲಪಡಿಸಲು ಮತ್ತು ಇತರ ರೀತಿಯ ಆರ್ಥಿಕ ಘಟಕಗಳಿಗೆ ಸಮಾನವಾಗಿ ಪರಿಗಣಿಸಲು ಬದ್ಧವಾಗಿದೆ.

# ಪ್ರಗತಿಯ ಪಥದಲ್ಲಿ ವರಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಕಂಪ್ಲಿ




ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ ಜಿಲ್ಲೆ ಶ್ರೀಮಂತ ಖನಿಜ ಸಂಪನ್ಮೂಲಗಳಿಂದ ಕೂಡಿದೆ. ತುಂಗಭದ್ರಾ ನದಿಯ ಸನಿಹದಲ್ಲಿರುವ ಇತಿಹಾಸ ಪ್ರಸಿದ್ಧ ಕಂಪ್ಲಿ, ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳ್ಳೊಂದಾಗಿದ್ದು, ಕಂಪ್ಲಿ ತಾಲೂಕಿನಲ್ಲಿ ಅನೇಕ ಸಹಕಾರಿ ಸಂಘ ಸಂಸ್ಥೆಗಳು ಅಸಂಖ್ಯಾತ ಜನರ ಆರ್ಥಿಕ ರಕ್ಷಣಾ ಕವಚದಂತೆ ಕೆಲಸ ಮಾಡುತ್ತಿವೆ. ಜನಸಾಮಾನ್ಯರ ಆರ್ಥಿಕ ಸ್ವಾವಲಂಬನೆಗೆ ಶಕ್ತಿ ತುಂಬುತ್ತಿವೆ. ಅಬಲವರ್ಗದವರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿಕೊಂಡು ಬರುತ್ತಿವೆ.

ಇಂತಹ ಸಹಕಾರ ಸಂಘಗಳ ಸಾಲಿನಲ್ಲಿ ವರಲಕ್ಷ್ಮಿ ಪತ್ತಿನ ಸಹಕಾರ ಸಂಘವು ಒಂದು. 2003 ರಲ್ಲಿ ದಿ. ಹೆಚ್. ಗವಿಸಿದ್ದಪ್ಪ ನವರ ಮುಂದಾಳತ್ವದಲ್ಲಿ ಪ್ರಾರಂಭವಾದ ಈ ಸಂಘ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಸಂಘದ ಕಾರ್ಯ ವ್ಯಾಪ್ತಿಯು ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳನ್ನು ಒಳಗೊಂಡಿದೆ. ಸಂಘ ಪ್ರಾರಂಭವಾಗಿ ಅತ್ಯಲ್ಪ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿ, ಕುಡತಿನಿ, ತೋರಣಗಲ್ಲು, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಕೊಟ್ಟೂರು ಮತ್ತು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ತನ್ನ ಶಾಖೆಗಳನ್ನು ಆರಂಭಿಸಿದೆ. ಸಂಘದ ಎಲ್ಲಾ ಶಾಖೆಗಳು ಪ್ರಗತಿಯಲ್ಲಿ ಸಾಗುತ್ತಿವೆ.

"ಆಡು ಮುಟ್ಟದ ಸೊಪ್ಪಿಲ್ಲ" ಎಂಬ ಆಡು ಮಾತಿನಂತೆ ಸಹಕಾರ ತತ್ವ ಸ್ಪರ್ಶವಿಲ್ಲದ ಸಮ ಸಮಾಜ ಊಹಿಸಲ ಅಸಾಧ್ಯ. ಬಡವರ ಬದುಕು ಸಹಕಾರಮಯವಾಗಬೇಕು ಎಂಬುದೇ ವರಲಕ್ಷ್ಮಿ ಪತ್ತಿನ ಸಹಕಾರ ಸಂಘದ ಆಶಯವಾಗಿದೆ. ಸಂಪೂರ್ಣ ಗಣಕೀರಣ, ಸುಸಜ್ಜಿತ ಹವಾನಿಯಂತ್ರಿತ ಕಟ್ಟಡವನ್ನು ಹೊಂದಿರುವ ಸಂಘ ಕಳೆದ 20 ವರ್ಷಗಳಿಂದ ಆರ್ಥಿಕವಾಗಿ ಹಿಂದುಳಿದ ಜನಸಾಮಾನ್ಯರಿಗೆ ಆರ್ಥಿಕ ಚೈತನ್ಯ ತುಂಬುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಪಟ್ಟಣ ಪ್ರದೇಶದ ಜನಸಾಮಾನ್ಯರ ಮೇಲೆ ವಿಶೇಷ ಕಾಳಜಿಯನ್ನು ಹೊಂದಿರುವ ಸಂಘ ತನ್ನ ರೈತ ಸದಸ್ಯರಿಗೂ ಆರ್ಥಿಕ ಸೌಲಭ್ಯವನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ.

ಭತ್ತದ ಕೊಯ್ಲು ಯಂತ್ರ, ಆಟೋ, ಕಾರು ಖರೀದಿ ಸೇರಿದಂತೆ ಅನೇಕ ಬಗೆಯ ಸಾಲ ವಿತರಣೆ ಮಾಡಿ ಅಬಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿ ಸಂಘ ತೊಡಗಿದೆ. ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ನಿಗೆ ಪ್ರತಿ ವರ್ಷ ಸಹಕಾರ ಶಿಕ್ಷಣ ನಿಧಿಯನ್ನು ಸಲ್ಲಿಸುವ ಮೂಲಕ ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರದ ಕಾರ್ಯದಲ್ಲಿ ಕೈಜೋಡಿಸಿದೆ. ಸಹಕಾರ ಸಪ್ತಾಹದಲ್ಲಿ, ಜಿಲ್ಲಾ ಸಹಕಾರ ಯೂನಿಯನ್ನು ಹಮ್ಮಿಕೊಳ್ಳುವ ತರಬೇತಿ ಕಾರ್ಯಕ್ರಮಗಳಲ್ಲಿ ಸಂಘ ಸಕ್ರಿಯವಾಗಿ ಭಾಗವಹಿಸುತ್ತಿದೆ.

ಸಂಘ ಪ್ರಾರಂಭವಾಗಿನಿಂದಲೂ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿ. ಹೆಚ್. ಗವಿಸಿದ್ದಪ್ಪ ರವರು ಹಾಕಿಕೊಟ್ಟ ಸೇವಾ ಮಾರ್ಗದಲ್ಲಿ ಮುನ್ನಡೆಯುತ್ತಿದೆ. ಜನರ ಪ್ರೀತಿ, ಸದಸ್ಯರ ವಿಶ್ವಾಸವನ್ನು ಗಳಿಸಿದೆ. ಪ್ರಸ್ತುತ ಅಧ್ಯಕ್ಷರು ಯುವ ನಾಯಕರೂ ಆಗಿರುವ ಹೆಚ್. ಮಂಜುನಾಥ ರವರ ಅಧ್ಯಕ್ಷತೆಯಲ್ಲಿ ಸಂಘ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇವರ ಕಾರ್ಯಕ್ಕೆ ಅನುಭವಿ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ ಪ್ರಶಂಸನೀಯವಾದುದು. ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ಲೋಕೇಶ್ವರ ರೆಡ್ಡಿ ರವರ ನೇತೃತ್ವದ ಸಿಬ್ಬಂದಿ ವರ್ಗದ ಪ್ರಾಮಾಣಿಕ ಶ್ರಮ ಇವೆಲ್ಲವುಗಳು ಸಂಘ ಇಂದು ಹೆಮ್ಮರವಾಗಿ ಬೆಳೆದು ನಿಲ್ಲಲು ಕಾರಣವೆನಿಸಿವೆ.

**ಸೌಲಭ್ಯಗಳು**

- ಸಂಘದಲ್ಲಿ ಬಂಗಾರದ ಆಭರಣಗಳ ಮೇಲೆ ತಕ್ಷಣ ಸಾಲ ಸೌಲಭ್ಯ ದೊರೆಯುತ್ತದೆ.
- ಸಂಘದಲ್ಲಿ ಲಾಕರ್‌ಗಳ ಸೌಲಭ್ಯವಿರುತ್ತದೆ.
- ಆರ್‌ಟಿಜಿಎಸ್ ಹಾಗೂ ನೆಫ್ಟ್ ಸೌಲಭ್ಯಗಳಿವೆ.
- ಸಾರ್ವಜನಿಕರಿಗೆ ಇ ಸ್ಟ್ಯಾಂಪಿಂಗ್ ಸೇವೆ ಕಲ್ಪಿಸಲಾಗುತ್ತಿದೆ.
- ಸಂಘದ ಎಲ್ಲಾ ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಮಾಡಲಾಗಿದೆ.

# ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ

ನಂ.17, "ಜಯನಿವಾಸ", ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು–4

ಸಂಖ್ಯೆ:ಲೆಪಶಾ/ಇತರೆ/ಫ್ಯಾಕ್ಸ್ ಸಭೆ/03/2023–24 ದಿನಾಂಕ : 15.05.2023

## "ಪ್ರಕಟಣೆ"

**ವಿಷಯ : ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಪರಷ್ಕೃತ ವರದಿ ನಮೂನೆ ಜಾರಿಗೊಳಿಸುವ ಸಂಬಂಧ.**

********

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ಈ ಹಿಂದೆ ಪ್ರಚುರಪಡಿಸಿರುವ ಹಾಗೂ ಜಾರಿಯಲ್ಲಿರುವ ವಿವಿಧ ನಮೂನೆಗಳ ಲೆಕ್ಕಪರಿಶೋಧನಾ ವರದಿಗಳ ನಮೂನೆಗಳ ಪೈಕಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಮಾದರಿ ಲೆಕ್ಕಪರಿಶೋಧನಾ ವರದಿಗಳನ್ನು ಹಿಂಪಡೆದು ಸದರಿ ಲೆಕ್ಕಪರಿಶೋಧನಾ ವರದಿಗಳನ್ನು ಹಿಂಪಡೆದು ಸದರಿ ಲೆಕ್ಕಪರಿಶೋಧನಾ ವರದಿಗಳ ನಮೂನೆಗಳನ್ನು ಪರಿಷ್ಕರಿಸುವ ಸಂಬಂಧ ಸಮಿತಿ ರಚಿಸಿ, ಸದರಿ ಸಮಿತಿಯಲ್ಲಿ ಇಲಾಖಾ ಅಧಿಕಾರಿಗಳು/ಸನ್ನದು ಲೆಕ್ಕಪರಿಶೋಧಕರುಗಳು ಸೇರಿ ಹಲವಾರು ಬಾರಿ ಚರ್ಚಿಸಿ, ಅಂತಿಮವಾಗಿ ದಿನಾಂಕ : 12.05.2023ರಂದು ನಿರ್ದೇಶನಾಲಯದಲ್ಲಿ ಜರುಗಿದ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿದ ನಂತರ ಈ ಎರಡೂ ಪ್ರವರ್ಗದ ಸಹಕಾರ ಸಂಘಗಳಿಗೆ ಹೊಸದಾಗಿ ವರದಿ ನಮೂನೆಗಳನ್ನು ಅಂತಿಮಗೊಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ನಮೂನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವೆಬ್‌ಸೈಟ್ www.sahakaradarpana.karnataka.gov.inರಲ್ಲಿ ಪ್ರಕಟಿಸಲಾಗಿದ್ದು, ಸದರಿ ಪ್ರವರ್ಗಗಳ ಈ ಹಿಂದಿನ ವರದಿ ನಮೂನೆಗಳನ್ನು ಹಿಂಪಡೆಯಲಾಗಿದೆ. ಸದರಿ ಪರಿಷ್ಕೃತ ನಮೂನೆಗಳಲ್ಲಿಯೇ ಲೆಕ್ಕಪರಿಶೋಧನಾ ವರದಿಗಳನ್ನು ನೀಡಲು ಸೂಚಿಸಲಾಗಿದೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ
ನಿರ್ದೇಶಕರು

# ಅಂತಾರಾಷ್ಟ್ರೀಯ ಸಹಕಾರ ದಿನ
# ಧ್ಯೇಯ : ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು



**ಶಶಿಧರ ಎಲೆ**
ಸಹಕಾರ ಸಂಘಗಳ
ಅಪರ ನಿಬಂಧಕರು (ನಿವೃತ್ತ),

**ಮಣ್ಣಿನ ಫಲವತ್ತತೆ, ಆರೋಗ್ಯ ಕಾಪಾಡುವಲ್ಲಿ ಉಪಕ್ರಮಗಳು, ಮಣ್ಣಿನ ಪರಿಕ್ಷಾ ಕೇಂದ್ರಗಳ ಸ್ಥಾಪನೆ, ಮಣ್ಣಿನ ಸವಕಳಿ ತಡೆ ಕ್ರಮಗಳಿಗೆ ಉತ್ತೇಜನ. ಸಾವಯವ ಗೊಬ್ಬರಗಳ ಉಪಯೋಗಕ್ಕೆ ಉತ್ತೇಜನ. ರಸಾಯನಿಕ ಗೊಬ್ಬರಗಳ ಸರಿಯಾದ, ಅಗತ್ಯ ಮಟ್ಟದಲ್ಲಿ ಬಳಕೆಗೆ ಉತ್ತೇಜನ. ಅತಿ ಕಡಿಮೆ ಕೃಷಿ ಪ್ರದೇಶದಲ್ಲಿ ಅತಿ ಹೆಚ್ಚು ಉತ್ಪಾದನೆ ತಂತ್ರಗಾರಿಕೆಗೆ ಅಗತ್ಯ ತಾಂತ್ರಿಕ ಸೌಲಭ್ಯಗಳು ಲಭ್ಯವಿದ್ದು ಅವುಗಳ ಸದ್ಬಳಕೆಗೆ ಉತ್ತೇಜನ.**

ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರ ವನ್ನು 'ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ' ಯಾಗಿ ಆಚರಿಸಲಾಗುತ್ತಿದೆ. ಈ ವರ್ಷ ಇದು 101 ನೇ ದಿನಾಚರಣೆ, ವಿಶ್ವ ಸಂಸ್ಥೆ ಯು ಅಂಗೀಕರಿಸಿದ ನಂತರ ಇದು 29ನೇ ದಿನಾಚರಣೆಯಾಗಿರುತ್ತದೆ. ಅಂತಾರಾಷ್ಟ್ರೀಯ ಮೈತ್ರಿ ಸಂಸ್ಥೆಯು ಪ್ರತಿ ವರ್ಷ ಈ ಆಚರಣೆಗೆ ದಿಕ್ಸೂಚಿ ಯಾಗಿ ಆಯಾ ವರ್ಷದ ಘೋಷವಾಕ್ಯ ನೀಡಿ ವಿಶ್ವಾದ್ಯಂತ ಸಹಕಾರ ಸಂಘಗಳು ಇದನ್ನು ಅಳವಡಿಸಿಕೊಂಡು ಆಚರಿಸುವ ಸದುದ್ದೇಶವನ್ನು ಹೊಂದಿದೆ. ಈ ವರ್ಷ ಮೊದಲ ಶನಿವಾರವೇ 1ನೇ ಜುಲೈ ಆಗಿರುವುದು ಕಾಕತಾಳೀಯ ವಾಗಿರುತ್ತದೆ. ಸಹಕಾರ ಸಂಘಗಳ ಉನ್ನತೀಕರಣ ಮತ್ತು ಅಭಿವೃದ್ಧಿಗಾಗಿ ಸಮಿತಿ (COPAC - committee for the promotion and advancement of cooperatives)ಯು 1995 ರಿಂದ ಇದನ್ನು ನಿರ್ಧರಿಸುತ್ತದೆ. ಈ ವರ್ಷದ ಘೋಷವಾಕ್ಯ 'ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು' ಎಂಬುದಾಗಿದೆ.

ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯ ಉದ್ದೇಶ 'ಸಹಕಾರ ಸಂಘಗಳ ಬಗ್ಗೆ ಅರಿವು ಮೂಡಿಸುವುದು ಇದರ ಮೂಲಕ ಸಹಕಾರ ಚಳವಳಿಯ ವಿಶ್ವಶಾಂತಿ, ಸಮಾನತೆ, ಆರ್ಥಿಕ ದಕ್ಷತೆ' ಮತ್ತು ಅಂತರಾಷ್ಟ್ರೀಯ ಒಗ್ಗಟ್ಟನ್ನು ಉತ್ತೇಜಿಸುವುದೇ ಆಗಿದೆ. ಈ ವರ್ಷದ ಘೋಷವಾಕ್ಯದ ಪ್ರಾಮುಖ್ಯತೆ ವಿಶ್ವವು 2030 ರ ಒಳಗೆ ಸುಸ್ಥಿರ ಅಭಿವೃದ್ಧಿ ಸಾಧಿಸಿ ವಿಶ್ವದಲ್ಲಿ ಮುಂದಿನ ಪೀಳಿಗೆಗೆ ಭೂಮಿಯಲ್ಲಿ ವಾಸಿಸಲು ಯೋಗ್ಯವಾದ ಪರಿಸರವನ್ನು ನಿರ್ಮಾಣ ಮಾಡುವುದಾಗಿದೆ. ಹಾಲಿ ಮಾನವನ ಅತಿಯಾದ ಭೂಮಿಯ ಲಭ್ಯ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ ಭೂಮಿಯು ವಾಸಿಸಲು ಯೋಗ್ಯವಲ್ಲದ ವಾತಾವರಣ ನಿರ್ಮಾಣವಾಗಿದೆ. ಅತಿಯಾದ ಅಭಿವೃದ್ಧಿ, ಅದರಿಂದ ಅತಿಯಾದ ಸಂಪನ್ಮೂಲಗಳ ಬಳಕೆ, ಅದರಲ್ಲಿಯೂ ಅತಿಯಾದ




ಪಳೆಯುಳಿಕೆ ಇಂಧನ ಬಳಕೆ, ಇದರಿಂದ ಕಲುಷಿತ ವಾತಾವಾರಣ ಇದರಿಂದ ಭೂಮಿಯು ತನ್ನ ಸಹಜ ವಾತಾವರಣ ಕಳೆದು ಕೊಂಡು ಇಂಗಾಲ ಸೂಸುವಿಕೆಯಿಂದ 'ಹಸಿರು ಮನೆ' ಪರಿಣಾಮ ಉಂಟಾಗಿ ಭೂಮಿಯು ಅತಿಯಾಗಿ ಬಿಸಿಯಾಗುತ್ತಿದೆ. ಇದನ್ನು ಕಡಿಮೆ ಮಾಡುವ ಅಗತ್ಯತೆ ಇದೆ. ಕಡಿಮೆ ಮಾಡಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆ ಇದೆ. ಇಲ್ಲದಿದ್ದಲ್ಲಿ ವಿವಿಧ ದುಷ್ಪರಿಣಾಮ ಗಳನ್ನು ಭೂಮಿ ಎದುರಿಸಬೇಕಾಗುತ್ತದೆ. ಉದಾಹರಣೆಗೆ, ಅಕಾಲಿಕ ಮಳೆ, ಮೇಘ ಸ್ಫೋಟ, ಹಿಮ ಕರಗುವಿಕೆ ಇದರಿಂದ ಸಮುದ್ರ ಮಟ್ಟದಲ್ಲಿ ಏರಿಕೆ, ಸಮುದ್ರ ತೀರದಲ್ಲಿನ ಅನೇಕ ನಗರಗಳ ಮುಳುಗುವಿಕೆ. ವಾತಾವರಣದ ಬದಲಾವಣೆಯಿಂದ ನೀರಾವರಿ, ಕೃಷಿ, ಕೈಗಾರಿಕೆ ಹೀಗೆ ಒಟ್ಟಾರೆ ವಿಶ್ವದ ಆರ್ಥಿಕತೆ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದುದರಿಂದ ಇದನ್ನು ತಡೆಗಟ್ಟುವುದು ಮತ್ತು ಅಭಿವೃದ್ಧಿಯನ್ನು ಸಾಧಿಸುವುದೂ ಮಾನವನ ಬೆಳವಣಿಗೆ ದೃಷ್ಟಿಯಿಂದ ಅತಿ ಅವಶ್ಯ. ಇವೆರಡೂ ಸಾಧನೆಗಳೇ 'ಸುಸ್ಥಿರ ಅಭಿವೃದ್ಧಿ'.

**ಸುಸ್ಥಿರ ಅಭಿವೃದ್ಧಿ ಸಾಧನೆಗಾಗಿ ವಿಶ್ವಸಂಸ್ಥೆಯು ಹದಿನೇಳು ಗುರಿಗಳನ್ನು ನೀಡಿ 2030ರ ಒಳಗೆ ಸಾಧಿಸಲು ಉದ್ದೇಶಿಸಿದೆ. ಅದರಂತೆ ಎಲ್ಲ ರಾಷ್ಟಗಳು ಈ ದಿಸೆಯಲ್ಲಿ ಅನೇಕ ಉಪಕ್ರಮಗಳನ್ನು ತೆಗೆದುಕೊಳುಳತ್ತಿವೆ. ಈ ಗುರಿಸಾಧನೆಯಲ್ಲಿ ಆರ್ಥಿಕ ಬೆಳವಣಿಗೆಯ ಪಾಲುದಾರರಾದ ಸಹಕಾರ ಸಂಘಗಳು ಭಾಗವಹಿಸಿ ಈ ಗುರಿಗಳ ಸಾಧನೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಆಶಯವನ್ನು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ ಹೊಂದಿದೆ.**




ಸುಸ್ಥಿರ ಅಭಿವೃದ್ಧಿ ಸಾಧನೆಗಾಗಿ ವಿಶ್ವಸಂಸ್ಥೆಯು ಹದಿನೇಳು ಗುರಿಗಳನ್ನು ನೀಡಿ 2030ರ ಒಳಗೆ ಸಾಧಿಸಲು ಉದ್ದೇಶಿಸಿದೆ. ಅದರಂತೆ ಎಲ್ಲ ರಾಷ್ಟಗಳು ಈ ದಿಸೆಯಲ್ಲಿ ಅನೇಕ ಉಪಕ್ರಮಗಳನ್ನು ತೆಗೆದುಕೊಳ್ಳುತ್ತಿವೆ. ಈ ಗುರಿಸಾಧನೆಯಲ್ಲಿ ಆರ್ಥಿಕ ಬೆಳವಣಿಗೆಯ ಪಾಲುದಾರರಾದ ಸಹಕಾರ ಸಂಘಗಳು ಭಾಗವಹಿಸಿ ಈ ಗುರಿಗಳ ಸಾಧನೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಆಶಯವನ್ನು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ ಹೊಂದಿದೆ. ಸಂಕ್ಷಿಪ್ತವಾಗಿ ಈ ಹದಿನೇಳು ಗುರಿಗಳು ಈ ಮುಂದಿನಂತಿವೆ. 1) ಬಡತನ ನಿರ್ಮೂಲನೆ 2) ಶೂನ್ಯ ಹಸಿವು 3) ಉತ್ತಮ ಆರೋಗ್ಯ ಮತ್ತು ಸ್ವಾತ್ತತೆ. 4) ಗುಣಮಟ್ಟದ ಶಿಕ್ಷಣ 5) ಲಿಂಗ ಸಮಾನತೆ 6) ಶುದ್ಧ ನೀರು ಮತ್ತು ಸ್ವಾಸ್ಥ ಶೌಚ ವ್ಯವಸ್ಥೆ 7) ನಿಲುಕಬಲ್ಲ ವೆಚ್ಚದಲ್ಲಿ ಶುದ್ಧ ಶಕ್ತಿ (ಇಂಧನ). 8) ಗೌರವಯುತ ನಡವಳಿಕೆ ಯುಳ್ಳ ಉತ್ತಮ ಕೆಲಸ ಮತ್ತು ಆರ್ಥಿಕ ಬೆಳವಣಿಗೆ 9) ಕೈಗಾರಿಕೆ ಮತ್ತು ನವೋಧ್ಯಮ 10) ಅಸಾಮಾನತೆಯ ನಿವಾರಣೆ 11) ಸುಸ್ಥಿರ ನಗರಗಳು ಮತ್ತು ಸಮೂಹ ಗಳು 12) ಜವಾಬ್ದಾರಿಯತ ಬಳಕೆ ಮತ್ತು ಉತ್ಪಾದನೆ 13) ವಾತಾವರಣ ಕ್ರಿಯಾಯೋಜನೆ 14) ನೀರಿನಲ್ಲಿನ ಜೀವ ಜಗತ್ತು 15) ಭೂಮಿಯ ಮೇಲಿನ ಜೀವ ಜಗತ್ತು 16) ಶಾಂತಿ, ನ್ಯಾಯ ಮತ್ತು ಬಲಯುತ ಸಂಸ್ಥೆಗಳು 17) ಗುರಿಗಳ ಸಾಧನೆಯಲ್ಲಿ ಪಾಲುಗಾರಿಕೆ.



ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳು ಆರ್ಥಿಕ ಔದ್ಯೋಗಿಕ ಸಂಸ್ಥೆಗಳಾಗಿದ್ದು, ಸಹಕಾರ ತತ್ವಗಳಲ್ಲಿ 'ಸಾಮಾಜಿಕ ಜವಾಬ್ದಾರಿ' ಕೂಡ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿದ್ದು ಅದರ ಅಂಗವಾಗಿ ಈಗಾಗಲೆ ಅನೇಕ ಈ ರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು ಈ ಕಾರ್ಯಕ್ರಮಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮೇಲಿನ ಎಸ್ – ಜಿ.ಪಿ (sustainable development goals S.G.P) (ಸುಸ್ಥಿರ ಅಭಿವೃದ್ಧಿ ಗುರಿಗಳು) ಗುರಿಗಳನ್ನು ಸಾಧಿಸಲು ನೆರವಾಗುತ್ತಿವೆ. ಕರ್ನಾಟಕದಲ್ಲಿ ಉದಾಹರಣೆಗೆ, 'ಯಶಸ್ವಿನಿ' ಆರೋಗ್ಯವಿಮೆ ಜಾರಿ – ನಿಲುಕಬಲ್ಲ ವೆಚ್ಚದಲ್ಲಿ ಅತಿ ಹೆಚ್ಚು ವೆಚ್ಚವಾಗುವ ಚಿಕಿತ್ಸೆ ಲಭ್ಯತೆ. ಸಹಕಾರ ಸಂಘಗಳಲ್ಲಿ ಶುದ್ಧ ನೀರಿನ ಘಟಕಗಳ ನಿರ್ವಹಣೆ, ಮಕ್ಕಳ 'ಕ್ಷೀರ ಭಾಗ್ಯ' ಯೋಜ್ಯನೆಯಲ್ಲಿ ಪಾಲೊಗಳ್ಳುವಿಕೆ. ಪೌಷ್ಠಿಕ ಆಹಾರದ ಸರಬರಾಜು ಯೋಜನೆ, ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ (ಪಿ.ಡಿ.ಎಸ್). ಅಡುಗೆ ಅನಿಲ ವಿತರಣೆ', ವಿದ್ಯಾಥಿಗಳಿಗೆ ವಿದಾರ್ಥಿವೇತನ, ರೈತರ ಮತ್ತು









ಜಾನುವಾರುಗಳಿಗೆ ವಿಮೆ ಸೌಲಭ್ಯ. ಇವೆಲ್ಲವು ಸುಸ್ಥಿರ ಬೆಳವಣಿಗೆಯ ಭಾಗವಾಗಿವೆ. ಈ ದಿಸೆಯಲ್ಲಿ ಅದರಲ್ಲೂ 2030 ರೊಳಗೆ ಭೂಮಿ ತಾಪಾಪಾನ ಕಡಿಮೆ ಗೊಳಿಸಲು (ಕನಿಷ್ಟ 01 ಡಿ.ಸೆ.) ತುರ್ತು ಕಾರ್ಯಕ್ರಮಗಳನ್ನು ಸಹಕಾರ ಸಂಘಗಳು ಈ ಅಂತಾರಾಷ್ಟ್ರೀಯ ಸಹಕಾರ ದಿನದಂದು ಆಲೋಚಿಸಿ ಹಾಕಿಕೊಳ್ಳಬಹುದು? ಇದರಿಂದ ಸಹಕಾರಿಗಳು ಈ ಕಾರ್ಯಕ್ರಮದಿಂದ ಹೊರಗಿಲ್ಲ ಎಂಬದನ್ನು ಸಾಬೀತು ಪಡಿಸಬಹುದಲ್ಲವೇ? ಈ ದಿಸೆಯಲ್ಲಿ ಆಲೋಚಿಸಿದಾಗ




- ಪಳೆಯುಳಿಕೆ ಇಂಧನಗಳ ಬಳಕೆ ಕಡಿತಗೊಳಿಸುವುದು. (ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು) ಪರ್ಯಾಯವಾಗಿ ವಿದ್ಯುಚ್ಛಕ್ತಿ ಚಾಲಿತ ವಾಹನಗಳ ಬಳಕೆ ಉತ್ತೇಜಿಸುವದು. ನೌಕರರು ಮತ್ತು ಸದಸ್ಯರು. ಅವುಗಳ ಖರೀದಿಗೆ ಪತ್ತಿನ ವ್ಯವಸ್ಥೆ ಯಲ್ಲಿ ಉತ್ತೇಜಿಸುವುದು. ಹಾಗೆಯೇ ದೈನಂದಿನ ಬಳಕೆಯಲ್ಲಿ ಸೌರಶಕ್ತಿ, ಪವನ ಶಕ್ತಿ, ಸಮುದ್ರ ಅಲೆಗಳ ಶಕ್ತಿಗಳ ಬಳಕೆಗೆ ಆದ್ಯತೆ' ಉತ್ತೇಜನ ನೀಡುವುದು. ಸಹಕಾರ ಸಂಘಗಳ ಮೇಲ್ಛಾವಣಿಗಳಲ್ಲಿ ಸೌರ ಫಲಕಗಳ ಅಳವಡಿಕೆ.
- ನೀರಿನ ಸದ್ಬಳಕೆ. ಯಾವುದೇ ಕಾರಣಕ್ಕೆ ಕುಡಿಯುವ ನೀರು ಪೋಲಾಗಿದಂತೆ ನೋಡಿಕೊಳ್ಳುವುದು. ಮಳೆ ನೀರಿನ ಕೊಯ್ಲು ತಂತ್ರಗಾರಿಕೆ ಅಳವಡಿಕೆ. ರೈತರು ತಮ್ಮ ಹೊಲ, ತೋಟಗಳಲ್ಲಿ ಕಿರು ನೀರಾವರಿ (ಹನಿ, ಸಿಂಪಡನೆ ನೀರಾವರಿ) ತಾಂತ್ರಿಕತೆಯ ಬಳಕೆ ಅದಕ್ಕೆ ಉತ್ತೇಜನ.
- ಮಣ್ಣಿನ ಫಲವತ್ತತೆ, ಆರೋಗ್ಯ ಕಾಪಾಡುವಲ್ಲಿ ಉಪಕ್ರಮಗಳು, ಮಣ್ಣಿನ ಪರಿಕ್ಷಾ ಕೇಂದ್ರಗಳ ಸ್ಥಾಪನೆ, ಮಣ್ಣಿನ ಸವಕಳಿ ತಡೆ ಕ್ರಮಗಳಿಗೆ ಉತ್ತೀಜನ. ಸಾವಯವ ಗೊಬ್ಬರಗಳ ಉಪಯೋಗಕ್ಕೆ ಉತ್ತೇಜನ. ರಸಾಯನಿಕ ಗೊಬ್ಬರಗಳ ಸರಿಯಾದ, ಅಗತ್ಯ ಮಟ್ಟದಲ್ಲಿ ಬಳಕೆಗೆ ಉತ್ತೇಜನ. ಅತಿ ಕಡಿಮೆ ಕೃಷಿ ಪ್ರದೇಶದಲ್ಲಿ ಅತಿ ಹೆಚ್ಚು ಉತ್ಪಾದನೆ ತಂತ್ರಗಾರಿಕೆಗೆ ಅಗತ್ಯ ತಾಂತ್ರಿಕ ಸೌಲಭ್ಯಗಳು ಲಭ್ಯವಿದ್ದು ಅವುಗಳ ಸದ್ಬಳಕೆಗೆ ಉತ್ತೇಜನ.
- ಸಹಕಾರಿ ಸಮೂಹ ಕೃಷಿ, ಜಂಟಿ ಕೃಷಿಗೆ ವಿಫಲ ಅವಕಾಶಗಿದ್ದು ಅದರ ಸಾಧನೆ.
- ಕೃಷಿ, ತೋಟಗಾರಿಕೆ, ಕೃಷಿ ಅವಲಂಭಿತ ಹೈನುಗಾರಿಕೆ, ಕೋಳಿ ಸಾಕಾಣಿ, ಕುರಿಸಾಕಾಣಿ, ಹಂದಿ ಸಾಕಾಣಿ ಈ ಪಶು ಸಂಗೋಪನೆ ಕಾರ್ಯಕ್ರಮಗಳಿಗೆ ಉತ್ತೇಜನ, ಸೌಲಭ್ಯಗಳನ್ನು ಒದಗಿಸುವುದಲ್ಲದೇ ಉತ್ಪನ್ನಗಳಿಗೆ ಮಧ್ಯಮ ವರ್ತಿಗಳ ಕೈತಪ್ಪಿಸಿ ಸಹಕಾರ ಸಂಘಗಳು ರೈತರಿಗೆ ನ್ಯಾಯಯುತ ಧರ ದೊರೆಯುವಂತೆ ನೋಡಿಕೊಳ್ಳುವುದು. ಈ ದಿಸೆಯಲ್ಲಿ ಆಧುನಿಕ ಮಾಹಿತಿ ತಂತ್ರಜ್ಞಾನ ಸಾಕಷ್ಟು ಅನುಕೂಲಕರ ವಾತಾವರಣ ನಿರ್ಮಾಣ ಮಾಡಿದ್ದು ಸಹಕಾರ ಸಂಘಗಳು ಅದರ ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ.
- ಅಸಂಘಟಿತ ಕಾರ್ಮಿಕ ವಲಯದ ಸಹಕಾರ ಸಂಘಗಳನ್ನು ಸ್ಥಾಪಿಸಿ ಅದರ ಮೂಲಕ ಅವರಿಗೆ ಅವಶ್ಯಕತೆಗಳು ಆರ್ಥಿಕ' ಸಾಮಾಜಿಕ ಸವಲತ್ತುಗಳನ್ನು ಪಡೆಯಲು ಸಹಕಾರಿ ಯಾಗುತ್ತದೆ.

ಮೇಲಿನವು ಕೆಲವೇ ಕೆಲವು ಸಲಹೆಗಳಾಗಿದ್ದು, ಸಹಕಾರ ಸಂಘಗಳಲ್ಲಿನ ಸಹಕಾರಿಗಳು 'ಪೆಟ್ಟಿಗೆ ಯಿಂದ ಹೊರಗೆ' (out of the box) ಆಲೋಚಿಸಿದಾಗ ತಮ್ಮ ಪರಿಸರದಲ್ಲಿ ತಾವು ಆಯೋಜಿಸಬಲ್ಲ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಂಡು ಅನುಷ್ಠಾನ ಗೊಳಿಸಬಹುದು. ಇದರಿಂದ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಅರ್ಥ ಪೂರ್ಣವಾಗಿ ಆಚರಿಸಿದಂತಾಗುತ್ತದೆ.

**ದೀಪವು ನಿನ್ನದೆ ಗಾಳಿಯು ನಿನ್ನದೆ ಆರದಿರಲಿ ಬೆಳಕು,**
**ಕಡಲು ನಿನ್ನದೆ ಹಡಗು ನಿನ್ನದೆ, ಮುಳಗದಿದರಲಿ ಬದುಕು,**
**ಬೆಟ್ಟವು ನಿನ್ನದೆ, ಬಯಲು ನಿನ್ನದೆ ಹಬ್ಬಿನಗಲಿ ಪ್ರೀತಿ ........**

**– ಕೆ.ಎಸ್. ನರಸಿಂಹಸ್ವಾಮಿ**



# ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ 2023



ಕೆ.ಎಸ್. ರಂಗೇಗೌಡ
ಹಿರಿಯ ಉಪ ನಿರ್ದೇಶಕರು (ನಿ)
ಕರ್ನಾಟಕ ಹಾಲು ಮಹಾಮಂಡಳಿ

**ವಾಸ್ತವದಲ್ಲಿ ಹಲವಾರು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದ ಸಿರಿಧ್ಯಾನ ಕೃಷಿಯನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ಪ್ರಯತ್ನಗಳು ನಡೆದವು. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ 21ನೇಯ ಶತಮಾನದ ಆದಿಯಾಗಿ ಮಧ್ಯಪ್ರದೇಶದಲ್ಲಿ "ಹಾರಕ, ಸಾಮೆ ಕಿತ್ತೆಯಿಸಿರಿ, ಸೋಯ, ಅವರೆ ಬೆಳೆಯಿರಿ" ಎಂಬುದು ಜನಪ್ರಿಯ ಘೋಷಣೆಯಾಗಿತ್ತು. ಸಿರಿಧಾನ್ಯ ಬೆಳೆಗಾರರನ್ನು ಗುರಿಯಾಗಿಟ್ಟುಕೊಂಡಿದ್ದ ಇಂತಹ ಘೋಷಣೆಗಳು ರೈತರನ್ನು ಸಿರಿಧಾನ್ಯ ಕೃಷಿಯಿಂದ ವಿಮುಖವಾಗಿ ಎಣ್ಣೆ ಬೀಜಗಳ ಕೃಷಿಯತ್ತಾ ಉತ್ತೇಜಿಸುವುದಾಗಿತ್ತು. ಇಂತಹ ಆಹಾರ ನಮ್ಮ ತಟ್ಟೆಗಳಿಂದ ಕಣ್ಮರೆಯಾಗತೊಡಗಿತು.**

ವಿಶ್ವ ಆಹಾರ ಪದ್ಧತಿಯಲ್ಲಿ ಕಿರು ಅಥವಾ ಸಿರಿ ಧಾನ್ಯಗಳು ಪ್ರಮುಖ ಪಾಲನ್ನು ಹೊಂದಿವೆ. ಹೆಸರೇ ಸೂಚಿಸುವಂತೆ ಪೋಷಕಾಂಶಗಳಿಂದ ಸಮೃದ್ಧವಾಗಿರುವ ಈ ಧಾನ್ಯಗಳು ಆರೋಗ್ಯಭಾಗ್ಯದ ಕಣಜವೇ ಆಗಿವೆ. ಒಂದು ಕಾಲದಲ್ಲಿ ಭಾರತೀಯ ಆಹಾರ ಪದ್ಧತಿಯ ಮುಖ್ಯ ಭಾಗವೇ ಆಗಿದ್ದ ಈ ಕಿರುಧಾನ್ಯಗಳು ಆಧುನಿಕತೆ ಭರದಲ್ಲಿ ಬದಲಾದ ಆಹಾರ ಪದ್ಧತಿಗಳಿಂದಾಗಿ ನಿಮ್ಮ ನಿತ್ಯಾಹಾರದ ಪಟ್ಟಿಯಿಂದ ಕಣ್ಮರೆಯಾಗಲಾರಂಭಿಸಿದವು. ಇದರ ಪರಿಣಾಮ ಆರೋಗ್ಯ ಮತ್ತು ಪರಿಸರ ಅಸಮತಲೋನದಂತಹ ಸಮಸ್ಯೆಗಳು ಹುಟ್ಟಿಕೊಂಡವು. ಅದರಲ್ಲಿಯೂ ಅಪೌಷ್ಟಿಕತೆ ಮತ್ತು ಮಧುಮೇಹದಂತಹ ತೀವ್ರ ಆರೋಗ್ಯ ಸಮಸ್ಯೆಗಳು ಮನುಷ್ಯನನ್ನು ಕಾಡತೊಡಗಿವೆ.

ಹೀಗೆ ಹಳಿತಪ್ಪುತ್ತಿರುವ ಪಾರಂಪರಿಕ ಆಹಾರ ಪದ್ಧತಿಯನ್ನು ಮರಳಿ ಸರಿದಾರಿಗೆ ತರುವ ಮೂಲಕ ಹದಗೆಡುತ್ತಿರುವ ಆರೋಗ್ಯ ಮತ್ತು ಪರಿಸರವನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನಗಳು ವಿಶ್ವದಾದ್ಯಂತ ನಿರಂತರವಾಗಿ ನಡೆಯುತ್ತಿವೆ.

ಭಾರತದಲ್ಲಿ ಪಾರಂಪರಿಕವಾಗಿ ಬೆಳೆಯಲಾಗುತ್ತಿರುವ ಸಿರಿಧಾನ್ಯಗಳ ಮಹತ್ವವನ್ನು ಜಗತ್ತಿಗೆ ಸಾರುವುದು ಮತ್ತು ಜನರಿಗೆ ಪೌಷ್ಟಿಕಾಂಶಯುಕ್ತ ಆಹಾರವನ್ನು ಒದಗಿಸಿ ಆ ಮೂಲಕ ಸಿರಿಧಾನ್ಯಗಳಿಗೆ ಜಾಗತಿಕ ಬೇಡಿಕೆಯನ್ನು ಸೃಷ್ಟಿಸುವ ಗುರಿಯನ್ನು ಭಾರತ ಸರ್ಕಾರ ಹೊಂದಿದೆ. ಈ ಹಿನ್ನೆಲೆಯಲ್ಲಿಯೇ ಭಾರತ ಸರ್ಕಾರ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 2023ನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ಘೋಷಿಸುವ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಇದರ ಪರಿಣಾಮ 2021 ರಲ್ಲಿ ಆಯೋಜಿತವಾಗಿದ್ದ ವಿಶ್ವ ಸಂಸ್ಥೆಯ 75ನೆಯ ಮಹಾಧಿವೇಶನದಲ್ಲಿ ಈ ಘೋಷಣೆಯನ್ನು ಅಧಿಕೃತವಾಗಿ ಮಾಡಲಾಗಿದೆ.

ಸಿರಿಧಾನ್ಯಗಳಲ್ಲಿನ ಪೌಷ್ಟಿಕತೆ ಮತ್ತದರಿಂದಾಗುವ ಆರೋಗ್ಯ ಲಾಭಗಳು ಹಾಗೂ ಪರಿಸರ ಸಂರಕ್ಷಣೆಯ ತುರ್ತು ಅಗತ್ಯತೆಗಳನ್ನು ಮನಗಂಡು ಹಿಂದಿನ ಆಹಾರ ಮತ್ತು ಕೃಷಿ ಪದ್ಧತಿಗೆ ಮರಳುವ ಉದ್ದೇಶವನ್ನು ಈ ಘೋಷಣೆಯು ಹೊಂದಿರುತ್ತದೆ. ಪ್ರತಿಕೂಲ ಮತ್ತು ಬದಲಾಗುತ್ತಿರುವ ಹವಾಮಾನದಲ್ಲಿಯೂ ಕೃಷಿಗೆ ಪೂರಕವಾಗಿರುವ ಈ ಬೆಳೆಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ನೀತಿ ನಿರೂಪಕರ ಗಮನ ಸೆಳೆಯಲು ಇಂತಹ ಘೋಷಣೆ ಅನಿವಾರ್ಯವೂ ಅವಕಾಶವೂ ಆಗಿರುತ್ತದೆ. ಕೃಷಿ ಮತ್ತು ಸುಸ್ಥಿರತೆಯಲ್ಲಿ ಸಿರಿಧಾನ್ಯಗಳ ಪಾತ್ರ ಮತ್ತು ಉತ್ತಮ ಆಹಾರವಾಗಿ ಸಿರಿಧಾನ್ಯಗಳ ಪಾತ್ರ ಮತ್ತು ಉತ್ತಮ ಆಹಾರವಾಗಿ ಸಿರಿಧಾನ್ಯಗಳಿಂದಾಗುವ ಲಾಭಗಳ ಬಗ್ಗೆ ವಿಶ್ವದೆಲ್ಲೆಡೆ ಅರಿವು ಮೂಡಿಸಲು ಇಂತಹ ಐತಿಹಾಸಿಕ ನಿರ್ಣಯಗಳು ನಿಜವಾಗಿಯೂ ನೆರವಾಗಲಿವೆ. ಅಲ್ಲದೆ ವಿಶ್ವದಾದ್ಯಂತ ಉತ್ಪಾದನೆಯಾಗುವ 70 ಲಕ್ಷ ಟನ್‌ಗೂ ಅಧಿಕ ಸಿರಿಧಾನ್ಯ ಉತ್ಪಾದನೆಯಲ್ಲಿ ಏಷ್ಯಾ ಖಂಡದ ಶೇ. 80 ಕ್ಕಿಂತಲೂ ಅಧಿಕ

ಪ್ರಮಾಣದ ಸಿರಿಧಾನ್ಯಗಳ ಉತ್ಪಾದನೆ ಮೂಲಕ ಭಾರತವು ಜಾಗತಿಕ ಸಿರಿಧಾನ್ಯಗಳ ತಾಣವಾಗಿ ಹೊರಹೊಮ್ಮಲು ಸಾಧ್ಯವಾಗಲಿದೆ.

**ಸಿರಿಧಾನ್ಯಗಳು ಬೆಳೆದು ಬಂದ ಹಾದಿಯಲ್ಲಿ ....** ಕಿರುಧಾನ್ಯಗಳೆಂದು ಕರೆಯಲಾಗುತ್ತಿದ್ದ ರಾಗಿ, ಜೋಳ, ನವಣೆ, ಸಜ್ಜೆ, ಹಾರಕ, ಬರಿಗು, ಊದಲು, ಕೊರಲೆ ಮೊದಲಾದ ವಿವಿಧ ಬಗೆಯ ಧಾನ್ಯಗಳಿಗೆ ಸುದೀರ್ಘ ಇತಿಹಾಸವಿದೆ. ಎಂತಹುದೇ ಹವಾಮಾನದಲ್ಲಿಯೂ ಬೆಳೆಯಬಲ್ಲ ವಿಶಿಷ್ಟ ಗುಣಲಕ್ಷಣಗಳುಳ್ಳ ಈ ಧಾನ್ಯಗಳು ನವಶಿಲಾಯುಗದ ಕಾಲದಿಂದಲೂ ಜನರ ಆಹಾರದ ಮೂಲವಾಗಿರುವುದನ್ನು ಕಾಣಬಹುದು. ಈ ಕಿರುಧಾನ್ಯಗಳು ಸಿಂಧೂ ಕಣಿವೆ ನಾಗರಿಕತೆಯ ಕಾಲದಲ್ಲಿಯೆ ಬಳಕೆಯಲ್ಲಿದ್ದವೆಂಬುದಕ್ಕೆ ಪುರಾವೆಗಳಿರುವುದನ್ನು ಗುರುತಿಸಲಾಗಿದೆ. ಹಿಂದಿನಿಂದಲೂ ಬೆಳೆಯುತ್ತಾ ಬರಲಾಗಿರುವ ನಿಮ್ಮ ಆಹಾರದ ಭಾಗವಾಗಿದ್ದ ಈ ಧಾನ್ಯಗಳನ್ನು ಸುಮಾರು 131 ದೇಶಗಳಲ್ಲಿ ಬೆಳೆಯಲಾಗುತ್ತಿತ್ತು. ನವಶಿಲಾಯುಗದಲ್ಲಿ ಒಣ ಹವಾಮಾನದಲ್ಲಿ ಆಫ್ರಿಕಾ ಮತ್ತು ಉತ್ತರ ಚೀನಾ ಪ್ರದೇಶಗಳಲ್ಲಿ ಈ ಬೆಳೆಗಳನ್ನು ಬೆಳೆಯಲಾಗುತ್ತಿತ್ತು ಮತ್ತು ಅಂದಿನ ಕಾಲಮಾನದಲ್ಲಿಯೇ ಈ ಸಿರಿಧಾನ್ಯಗಳು ಸುಮಾರು 60 ಕೋಟಿ ಜನರ ಸಾಂಪ್ರದಾಯಿಕ ಆಹಾರವಾಗಿದ್ದಿತು.

ಅಂದಿನ ದಿನಮಾನಗಳಲ್ಲಿನ ಕಡಿಮೆ ನೀರಿನ ಲಭ್ಯತೆಯ ಕಾರಣದಿಂದಾಗಿ ಒಣ ಮತ್ತು ಬರಡು ಭೂಮಿಗೆ ಸಿರಿಧಾನ್ಯಗಳೆ ಆಧಾರವಾಗಿದ್ದವು. ಭಾರತದಲ್ಲಿನ ಒಣ ಮತ್ತು ಅರೆಶುಷ್ಕ ಉಷ್ಣ ವಲಯದ ಪರಿಸರದಲ್ಲಿ ಮುಖ್ಯ ಬೆಳೆಗಳನ್ನಾಗಿ ಈ ಸಿರಿಧಾನ್ಯಗಳನ್ನು ಬೆಳೆಯಲಾಗುತ್ತಿತ್ತು. ಭಾರತದಲ್ಲಿ ಕಡಿಮೆ ಮತ್ತು ಮದ್ಯಮ ಮಳೆ (200–80 ಮಿಮೀ) ಪ್ರಮಾಣ ಹೊಂದಿರುವ ರಾಜ್ಯಗಳಲ್ಲಿ ಬೆಳೆಯಲಾಗುವ ಈ ಧಾನ್ಯಗಳನ್ನು ಸಾಮಾನ್ಯವಾಗಿ 'ಮ್ಯಾಟ್ರಿ ಸಿರಿಯಲ್ಸ್' ಅಥವಾ 'ಒಣ ಪ್ರದೇಶದ ಧಾನ್ಯಗಳು' ಎಂದೂ ಕರೆಯಲಾಗುತ್ತಿತ್ತು. ಬರಡು ಭೂಮಿಯಲ್ಲಿಯೂ ಸಹ ಬೆಳೆಯಬಹುದಾದ ಸಿರಿಧಾನ್ಯಗಳು 'ಪವಾಡ ಧಾನ್ಯಗಳು' ಅಥವಾ 'ಭವಿಷ್ಯದ ಬೆಳೆಗಳು' ಎಂದೂ ಸಹ ಹೆಸರಾಗಿ ರೈತಾಪಿ ಜನರಲ್ಲಿ ಭರವಸೆ ಮೂಡಿಸಿದ ಧಾನ್ಯಗಳು.

**ಆರೋಗ್ಯಕರ ಬದುಕಿಗೆ ಪ್ರಾಚೀನ ಧಾನ್ಯಗಳು :** ಶತಮಾನಗಳಿಂದ ಭಾರತೀಯ ಆಹಾರ ಪದ್ಧತಿಯ ಭಾಗವೇ ಆಗಿರುವ ಸಿರಿಧಾನ್ಯಗಳು ನಮ್ಮ ಆಹಾರ ಪದ್ಧತಿ, ಸಂಸ್ಕೃತಿ ಹಾಗೂ ಸಂಪ್ರದಾಯಗಳಲ್ಲಿ ಬೆರೆತು ಹೋಗಿವೆ. ಹಾಗಾಗಿಯೆ ಹಸಿರು ಕ್ರಾಂತಿಗೂ ಮೊದಲು ಭಾರತೀಯ ಉಪಖಂಡದ ಬಹುತೇಕ ಮನೆಗಳಲ್ಲಿನ ಆಹಾರದ ಪಟ್ಟಿಯಲ್ಲಿ ಸಿರಿಧಾನ್ಯಗಳು ಪ್ರಮುಖ ಸ್ಥಾನ ಪಡೆದಿದ್ದವು.

ದೇಶವು ಎದುರಿಸುತ್ತಿದ್ದ ಆಹಾರದ ಸಮಸ್ಯೆಯನ್ನು ಪರಿಹರಿಸಿಕೊಂಡು ಸ್ವಾವಲಂಬನೆ ಸಾಧಿಸುವ ದಿಸೆಯಲ್ಲಿ ಅರವತ್ತರ ದಶಕದಲ್ಲಿದ್ದ ಹಸಿರುಕ್ರಾಂತಿಯು ಸಂಶೋಧನೆ, ಅಭಿವೃದ್ಧಿ, ಹೊರ ತಂತ್ರಜ್ಞಾನಕ್ಕೆ ಮುನ್ನುಡಿ ಬರೆಯಿತು. ಇದರ ಪರಿಣಾಮವಾಗಿ ಹೊಸ ತಳಿಗಳು ಕೃಷಿ ಕ್ಷೇತ್ರವನ್ನು ಪ್ರವೇಶಿಸಿದವು. ಅಧಿಕ ಆಹಾರ ಉತ್ಪಾದನೆಯ ಗುರಿಯೊಂದಿಗೆ ಭತ್ತ, ಗೋಧಿ, ಸೋಯಾ ಮೊದಲಾದ ಬೆಳೆಗಳನ್ನು ಬೆಳೆಯಲು ಉತ್ತೇಜಿಸಲಾಯಿತು. ದೇಶದಲ್ಲಿ ನಿರಂತರವಾಗಿ ಹೆಚ್ಚುತ್ತಿದ್ದ ಜನಸಂಖ್ಯೆಗನುಗುಣವಾಗಿ ಆಹಾರ ಧಾನ್ಯಗಳು ಉತ್ಪಾದನೆಯಾಗದಿದ್ದುದು ಒಂದು ಕಡೆಯಾದರೆ ಪ್ರಾಶ್ಚಿಮಾತ್ಯ ಪ್ರಭಾವ, ಉತ್ತೇಜನದಿಂದಾಗಿ ಭತ್ತ, ಗೋಧಿಯಂತಹ ಬೆಳೆಗಳು ಕಿರುಧಾನ್ಯಗಳ ಸ್ಥಾನವನ್ನು ಆಕ್ರಮಿಸತೊಡಗಿದ್ದವು. ಭತ್ತ, ಗೋಧಿ ಬೆಳೆಗಳನ್ನು ಹೆಚ್ಚೆಚ್ಚು ಬೆಳೆದಂತೆ ಅವುಗಳು ಪ್ರಮುಖ ಆಹಾರಗಳಾಗಿ ನಮ್ಮ ಆಹಾರ ಪದ್ಧತಿಯಲ್ಲಿ ಸೇರ್ಪಡೆಗೊಂಡವು. ದೇಶ ಅಭಿವೃದ್ಧಿ ಹೊಂದತೊಡಗಿದಂತೆ ಸಾಮಾಜಿಕ–ಆರ್ಥಿಕ ಕಾರಣಗಳಿಂದಾಗಿ ಸಿರಿಧಾನ್ಯಗಳು ಬಡವರ ಆಹಾರವೆಂದು ಜನರ ನಿರ್ಲಕ್ಷ್ಯಕ್ಕೊಳಗಾದವು.

ಹಸಿರುಕ್ರಾಂತಿಯು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ದೇಶದಲ್ಲಿ ಯಶಸ್ಸು ಕಂಡಿತಾದರೂ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಿತು. ರಸಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆಯಿಂದ ಭೂಮಿಗೆ ರಾಸಾಯನಿಕಗಳ ವಿಷ ಉಣಿಸಲಾರಂಭಿಸಿದಂತೆ ಭೂಮಿ ಫಲವತ್ತತೆ ಕಳೆದುಕೊಳ್ಳಲಾರಂಭಿಸಿತು. ಅಲ್ಲದೆ ನದಿ ಮತ್ತಿತರ ನೀರಿನ ಮೂಲಗಳು ಕಲುಷಿತಗೊಂಡವು. ಇದೆಲ್ಲದರ ಪರಿಣಾಮವಾಗಿ ತಿನ್ನುವ ಆಹಾರ, ಕುಡಿಯುವ ನೀರು ವಿಷಮಯಗೊಂಡು ಅವುಗಳನ್ನು ಉಪಯೋಗಿಸಿದ ಮನುಷ್ಯನ ದೇಹವು ರೋಗ ರುಜಿನಗಳ ಗೂಡಾಗತೊಡಗಿದೆ. ಮನುಷ್ಯನ ಅನಾರೋಗ್ಯವನ್ನೆ ಬಂಡವಾಳ ಮಾಡಿಕೊಂಡಿರುವ ಔಷಧಿ ಕಂಪನಿಗಳು ಸಹ ರಾಸಾಯನಿಕಯುಕ್ತ ಔಷಧಿಗಳನ್ನು ಮನುಷ್ಯನ ದೇಹದೊಳಕ್ಕೆ ನಿತ್ಯವೂ ಸೇರಿಸುತ್ತಾ ತಮ್ಮ ವ್ಯಾಪಾರ ವಹಿವಾಟು ಹೆಚ್ಚಿಸಿಕೊಳ್ಳುವುದರಲ್ಲಿ ಮುಳುಗಿ ಹೋಗಿವೆ.

ವಾಸ್ತವದಲ್ಲಿ ಹಲವಾರು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದ ಸಿರಿಧ್ಯಾನ ಕೃಷಿಯನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ಪ್ರಯತ್ನಗಳು ನಡೆದವು. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ 21ನೇಯ ಶತಮಾನದ ಆದಿಯಾಗಿ ಮಧ್ಯಪ್ರದೇಶದಲ್ಲಿ "ಹಾರಕ, ಸಾಮೆ ಕಿತ್ತೆಯಿಸಿರಿ, ಸೋಯ, ಅವರೆ ಬೆಳೆಯಿರಿ" ಎಂಬುದು ಜನಪ್ರಿಯ ಘೋಷಣೆಯಾಗಿತ್ತು. ಸಿರಿಧಾನ್ಯ ಬೆಳೆಗಾರರನ್ನು ಗುರಿಯಾಗಿಟ್ಟುಕೊಂಡಿದ್ದ ಇಂತಹ ಘೋಷಣೆಗಳು ರೈತರನ್ನು ಸಿರಿಧಾನ್ಯ ಕೃಷಿಯಿಂದ ವಿಮುಖವಾಗಿ ಎಣ್ಣೆ ಬೀಜಗಳ ಕೃಷಿಯತ್ತಾ ಉತ್ತೇಜಿಸುವುದಾಗಿತ್ತು. ಇಂತಹ ಆಹಾರ ನಮ್ಮ ತಟ್ಟೆಗಳಿಂದ ಕಣ್ಮರೆಯಾಗತೊಡಗಿತು.

ಪ್ರಸ್ತುತ ಕೋವಿಡೋತ್ತರ ಕಾಲದಲ್ಲಿ ಮನುಷ್ಯನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಬಲ್ಲ ಆಹಾರ ಪದ್ದತಿಯ ಅನಿವಾರ್ಯತೆ ಮುನ್ನೆಲೆಗೆ ಬಂದು ನಿಂತಿದೆ. ಸಹಜವಾಗಿ ಜನರ ಜಾಣ ಆಯ್ಕೆ ಸಿರಿಧಾನ್ಯಗಳಾಗಿವೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

... ಹಿಂದಿನ ಸಂಚಿಕೆಯಿಂದ

### ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮ 1960 ಭಾರತದಲ್ಲಿ ಸಹಕಾರಿ ಚಳುವಳಿ ಮತ್ತು ಸಹಕಾರಿ ಕಾನೂನಿನ ಇತಿಹಾಸ ಹಾಗೂ ವಿಕಾಸ

ಭಾರತದಲ್ಲಿ ಸಹಕಾರಿ ಚಳುವಳಿಗೆ 114 ವರ್ಷಗಳ ಇತಿಹಾಸವಿದೆ. ಫ್ರೆಡರಿಕ್ ನಿಕೋಲ್ಸನ್ ರವರ ವರದಿ ಆದಾರದ ಮೇಲೆ ಭಾರತದಲ್ಲಿ ಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಅಧಿಕೃತವಾಗಿ 1904 ಮಾರ್ಚ್ 25ನೇ ದಿನಾಂಕದಂದು ಸಹಕಾರಿ ಕಾಯ್ದೆ 1904 (Co-operative societies act 1904) ಜಾರಿಗೆ ತರಲಾಯಿತು. ಸದರಿ ಕಾಯ್ದೆಯನ್ವಯ ಕರ್ನಾಟಕದ ಅಂದಿನ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನಹಾಳ ಎಂಬ ಗ್ರಾಮದಲ್ಲಿ 1905 ಮೇ 8 ರಂದು ಕೃಷಿ ಪತ್ತಿನ ಸಹಕಾರ ಸಂಘ ನೊಂದಣಿಯಾಗಿ ಕಾರ್ಯ ಪ್ರಾರಂಭಿಸಿರುತ್ತದೆ. ಈ ಕಾಯ್ದೆಯನ್ವಯ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಮಾತ್ರ ನೊಂದಾಯಿಸಲು ಅವಕಾಶವಿದ್ದು, ಈ ಕಾಯ್ದೆಯಲ್ಲಿನ ನ್ಯೂನ್ಯತೆಗಳನ್ನು ಹೋಗಲಾಡಿಸಲು 1912ರಲ್ಲಿ ಸಹಕಾರ ಸಂಘಗಳ ಕಾಯ್ದೆ 1912 (Co-operative societies act 1912) ಜಾರಿಗೆ ಬಂದಿತು. ಇದರನ್ವಯ ಎಲ್ಲ ತರಹದ ಸಹಕಾರ ಸಂಘಗಳನ್ನು ನೊಂದಾಯಿಸಲು ಅವಕಾಶ ಕಲ್ಪಿಸಿರುತ್ತದೆ.

ಬ್ರಿಟಿಷ್ ಸರ್ಕಾರವು 1919ರಲ್ಲಿ ಸಾಂವಿಧಾನಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಅದರ ಪ್ರಕಾರ (Government of India act 1919) ರಡಿಯಲ್ಲಿ ಸಹಕಾರ ವಿಷಯಪ್ರಾಂತೀಯ ಸರ್ಕಾರಗಳಿಗೆ ವರ್ಗಾವಣೆಯಾಗಿದ್ದು, ಆಗ ಪ್ರಸ್ತುತದಲ್ಲಿದ್ದ Bombay Co-operative Societies Act 1925, Madras Co-operative Societies Act 1932, Coorg Co-operative Societies Act 1936, Hydrabad Co-operative Societies Act 1952 and Mysore Co-operative Societies Act 1925 ರಚನಗೊಂಡು ಜಾರಿಗೆ ಬಂದವು.

ಸ್ವಾತಂತ್ರ್ಯದ ನಂತರ ರಾಜ್ಯಗಳು ಭಾಷೆ ಆಧಾರದ ಮೇಲೆ ಪುನರ್ವಿಂಗಡನೆ ಆದ ಮೇಲೆ 1956ರಲ್ಲಿ ಮೈಸೂರು ರಾಜ್ಯ (ಇಂದಿನ ಕರ್ನಾಟಕ ರಾಜ್ಯ) ಅಸ್ತಿತ್ವಕ್ಕೆ ಬಂದಿತು. ರಾಜಾ ಸಮಿತಿಯು 1957ರಲ್ಲಿ ಸಲಹೆ ಮಾಡಿದ ಮಾದರಿ ಕಾಯ್ದೆ (ಬಿಲ್)ಯನ್ನು ಅನುಸರಿಸಿ 'ಮೈಸೂರು ಸಹಕಾರ ಸಂಘಗಳ ಕಾಯ್ದೆ 1959' ಜಾರಿಗೆ ಬಂದಿತು. ಇದೀಗ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ಆಗಿದೆ. ಈ ಕಾಯ್ದೆಯು ಪ್ರಸ್ತುತ 132 ಕಲಂ ಹಾಗೂ 56 ನಿಯಮಗಳನ್ನು ಒಳಗೊಂಡಿರುತ್ತದೆ.

ಪ್ರಜಾಪ್ರಭುತ್ವದ ಪ್ರಭಾವ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿ ಹಿನ್ನೆಲೆಯಲ್ಲಿ ಸದರಿ ಕಾಯ್ದೆಗೆ ತಹಲ್‌ವರೆಗೆ 31ಕ್ಕೂ ಹೆಚ್ಚು ತಿದ್ದುಪಡಿಗಳಾಗಿವೆ. ಕಾಯ್ದೆಯಲ್ಲಿನ ಕೆಲವು ಅಂಶಗಳು ಸಹಕಾರ ತತ್ವದ ಮೂಲ ಆಶಯಕ್ಕೆ ವಿರುದ್ಧವಾಗಿರುವುದನ್ನು ಪರಿಗಣಿಸಿ ಹಾಗೂ ಸಹಕಾರ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸ್ವಾಯುತ್ತತೆ ನೀಡುವ ಮೂಲಕ ದಿನಾಂಕ : 12–01–2012 ರಿಂದ ಜಾರಿಗೆ ಬರುವಂತೆ ಭಾರತದ ಸಂವಿಧಾನದ 97ನೇ ತಿದ್ದುಪಡಿಯನ್ನು ಅಂಗೀಕರಿಸಲಾಯಿತು, ಈ ಮೂಲಕ ಸಹಕಾರಕ್ಕೆ ಸಂಬಂಧಿಸಿದ ಕೆಲವು ವಿಷಯಗಳಿಗೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿ, ಸ್ಥಾನ ನೀಡಲಾಗಿದೆ. ಸಂವಿಧಾನದ ಅನುಚ್ಛೇದ (Article) 19(1)(ಸಿ) ರಲ್ಲಿ ಸಹಕಾರ ಸಂಸ್ಥೆಗಳನ್ನು ಸ್ವಪ್ರೇರಣೆಯಿಂದ ರಚಿಸಿಕೊಳ್ಳುವುದು ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕಾಗಿದೆ. ಅನುಚ್ಛೇದ 43–ಬಿ ರಲ್ಲಿ ಸಹಕಾರ ಸಂಸ್ಥೆಗಳು ಸ್ವಾಯುತ್ತತೆ ಪ್ರಜಾಪ್ರಭುತ್ವ ನಿಯಂತ್ರಣ, ವೃತ್ತಿಪರತೆ ಹಾಗೂ ಕ್ರಿಯಾಶೀಲತೆಯಿಂದ ಕೂಡಿರಲು ಹೆಚ್ಚಿನ ಒತ್ತು ನೀಡಿರುತ್ತದೆ.ಇದನ್ನು ಅನುಸರಿಸಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959ಕ್ಕೂ ಸಹ ದಿನಾಂಕ : 11–01–2013ರ ನಂತರ 2014 ಮತ್ತು 2016ರಲ್ಲಿ ತಿದ್ದುಪಡಿ ಮಾಡಲಾಗಿದೆ.

### ಸಹಕಾರ ಸಂಘಗಳ ನೊಂದಣಿ ಕಲಂ–7

ಒಂದು ಸಹಕಾರ ಸಂಘವು ಒಂದು ಶಾಸನಬದ್ಧ ಸಂಸ್ಥೆಯಾಗಿ ಕೆಲಸ ಮಾಡಬೇಕಾದರೆ ಅದು ನೊಂದಣಿ ಆಗಬೇಕು.ಈ ನೊಂದಣಿಯು ಕರ್ನಾಟಕದಲ್ಲಿ ಕ.ರಾ.ಸ.ಸಂ.ಕಾಯಿದೆ. 1959 ಮತ್ತು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮಗಳು 1960 (ಕ.ರಾ.ಸ.ಸಂ.ನಿಯಮಗಳು) ಇವುಗಳ ಪ್ರಕಾರ ಆಗುತ್ತದೆ. ಸಹಕಾರ ಸಂಘಗಳನ್ನು ನೊಂದಣಿ ಮಾಡುವವರು ನಿಬಂಧಕರು. ಇವರು ಸಹಕಾರ ಸಂಘವನ್ನು ನೊಂದಣಿ ಮಾಡಿ 'ನೋಂದಣಿ ದೃಢೀಕರಣ ಪತ್ರ'ವನ್ನು ನೀಡುತ್ತಾರೆ. ಸಹಕಾರ ಸಂಘಗಳು ಒಂದು ಹಳ್ಳಿಯ ಕಾರ್ಯವ್ಯಾಪ್ತಿಯಿಂದ ಹಿಡಿದು ಇಡೀ ಕರ್ನಾಟಕ ರಾಜ್ಯದವರೆಗೂ ತಮ್ಮ ಭೌಗೋಳಿಕ ಕಾರ್ಯವ್ಯಾಪ್ತಿಯನ್ನು ಅವುಗಳ ಉದ್ದೇಶಗಳಿನ್ನು ಅನುಸರಿಸಿ, ಇಟ್ಟುಕೊಳ್ಳಬಹುದು. ಕರ್ನಾಟಕದಲ್ಲಿ ಸಂಘಗಳ ಭೌಗೋಳಿಕ ಕಾರ್ಯವ್ಯಾಪ್ತಿಗೆ ಅನುಸಾರವಾಗಿ ಅವುಗಳನ್ನು ನೋಂದಣಿ ಮಾಡಲು ನಿಬಂಧಕರ ಅಧಿಕಾರವನ್ನು ಜಂಟಿ ನಿಬಂಧಕರು, ಉಪನಿಬಂಧಕರು, ಸಹಾಯಕ ನಿಬಂಧಕರು ಮುಂತಾದ ಅಧಿಕಾರಿಗಳಿಗೆ ಕೊಟ್ಟಿದೆ. ಕೆಲವು ವಿಶೇಷ ರೀತಿಯ ಸಹಕಾರ ಸಂಘಗಳಿಗೆ, ಉದಾಹರಣೆಗೆ, ಹಾಲು ಉತ್ಪಾದಕರ ಸಹಕಾರ ಸಂಘಗಳು, ನೇಕಾರರ ಸಹಕಾರ ಸಂಘಗಳು ಇತ್ಯಾದಿಗಳಿಗೆ

**ಪ್ರಸ್ತಾವನೆ ಸೇರಿದ ದಿನಾಂಕದಿಂದ 3 ತಿಂಗಳ ಒಳಗಾಗಿ ನಿಬಂಧಕರು ತಿದ್ದುಪಡಿಯನ್ನು ಅಂಗೀಕರಿಸಿ ಅಥವಾ ತಿರಸ್ಕರಿಸಿ ಆದೇಶ ನೀಡಬೇಕು.ತಿದ್ದುಪಡಿ ತಿರಸ್ಕೃತವಾದಾಗ ಸಂಘವು ಮೇಲ್ಮನವಿ ಸಲ್ಲಿಸಬಹುದು. ತಿದ್ದುಪಡಿ ನೋಂದಣಿ ಪ್ರಸ್ತಾವನೆ ತಲುಪಿದ 3 ತಿಂಗಳ ಒಳಗಾಗಿ ನಿಬಂಧಕರು ಏನೂ ಕ್ರಮ ಕೈಗೊಳ್ಳದಿದ್ದಲ್ಲಿ ತಿದ್ದುಪಡಿ ನೋಂದಣಿ ಆಗಿದೆ ಎಂದು ಭಾವಿತವಾಗುತ್ತದೆ. ಸಂಘವು ತನ್ನ ಹೆಸರು, ವಿಳಾಸ, ಸದಸ್ಯರ ಜವಾಬ್ದಾರಿ ನಿಯಮಿತವೋ ಅಲ್ಲವೋ ಮುಂತಾದುವನ್ನು ಬದಲಾಯಿಸಲು ಮೇಲೆ ಹೇಳಿದ ರೀತಿಯ ತಿದ್ದುಪಡಿಯ ಮೂಲಕವೇ ಮಾಡಬೇಕು. ಆದರೆ ಜವಾಬ್ದಾರಿಯ (ನಿಯಮಿತ ಅಥವಾ ಅನಿಯಮಿತ) ಬಗ್ಗೆ ಸಂಬಂಧಿಸಿದ ತಿದ್ದುಪಡಿಗೆ ಮಾತ್ರ ಎಲ್ಲ ಸದಸ್ಯರ ಮತ್ತು ಎಲ್ಲ ಸಾಲಗಾರರ ಒಪ್ಪಿಗೆಯೂ ಬೇಕು ಅಥವಾ ಎಲ್ಲ ಸದಸ್ಯರ ಮತ್ತು ಎಲ್ಲ ಸಾಲಗಾರರ ತಗಾದೆಗಳನ್ನು ತೀರಿಸಿರಬೇಕು.**

ಸಂಬಂಧಿಸಿದಂತೆ ನಿಬಂಧಕರ ನೋಂದಣಿ ಅಧಿಕಾರಗಳನ್ನು ಆಯಾ ಇಲಾಖೆಯ ಅಧಿಕಾರಿಗಳಿಗೂ ನೀಡಲಾಗಿದೆ.

**ಕರ್ನಾಟಕದಲ್ಲಿ ಸಹಕಾರ ಸಂಘಗಳು ನೋಂದಣಿ ಆಗಬೇಕಾದಲ್ಲಿ ಅವು ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕು**

- ಸದಸ್ಯರ ಸಂಖ್ಯೆ ಕನಿಷ್ಠ 10 ಇರಬೇಕು;
- ಪತ್ತಿನ ಸಹಕಾರ ಸಂಘಗಳಾಗಿದ್ದಲ್ಲಿ ಒಂದೇ ಕುಟುಂಬದ ಸದಸ್ಯರು ಪ್ರವರ್ತಕರಾಗಿರತಕ್ಕದ್ದಲ್ಲ;
- ಸದಸ್ಯರಿಗೆ ಸಾಮಾನ್ಯವಾದ ಆರ್ಥಿಕ ಹಿತಾಸಕ್ತಿಗಳು ಇರಬೇಕರು;
- ಸಂಘಗಳು ಸಹಕಾರಿ ತತ್ವಗಳ ಪ್ರಕಾರ ಕೆಲಸ ಮಾಡಬೇಕು;
- ಸದಸ್ಯರ ಜವಾಬ್ದಾರಿ 'ನಿಯಮಿತ' ಆಗಿರಬೇಕು.(ಸಂಘಗಳ ತಮ್ಮ ಹೆಸರಿನ ಕೊನೆಯಲ್ಲಿ 'ನಿಯಮಿತ' ಎಂಬ ಪದವನ್ನು ಕಾಣಿಸಬೇಕು)

ಸಹಕಾರ ಸಂಘಗಳನ್ನು ನೋಂದಣಿ ಮಾಡಲು ಅರ್ಜಿ ಹಾಕುವ ವಿಧಾನವನ್ನು ಕಾಯಿದೆ ಮತ್ತು ನಿಯಮಗಳಲ್ಲಿ ನೀಡಲಾಗಿದೆ.

ಸಹಕಾರ ಸಂಘಗಳ ಚಟುವಟಿಕೆ ಎಂದರೆ ಹಣಕಾಸಿನ ಚಟುವಟಿಕೆಯೇ ಆಗಿರುತ್ತದೆ. ಸಹಕಾರ ಸಂಘಗಳು ಹಣಕಾಸಿನ ವ್ಯವಹಾರಗಳನ್ನು ನಡೆಸಲು ನೋಂದಣಿ ಆಗುವುದರಿಂದ, ಅವು ಆರ್ಥಿಕವಾಗಿ ಯಶಸ್ವಿ ಆಗುತ್ತವೆಯೇ ಎಂಬುದನ್ನು ಪರಿಶೀಲಿಸುವ ಅಧಿಕಾರ ನಿಬಂಧಕರಿಗೆ ಇದೆ. ಒಂದು ಸಹಕಾರ ಸಂಘವು ಆರ್ಥಿಕವಾಗಿ ಯಶಸ್ವಿ ಆಗುವುದಿಲ್ಲ ಎಂದು ನಿಬಂಧಕರಿಗೆ ಮನದಟ್ಟಾದರೆ, ಅವರು ನೋಂದಣಿ ಯನ್ನು ನಿರಾಕರಿಸಬಹುದು. ಈ ಕಾರಣಕ್ಕಾಗಿ ವಿವಿಧ ರೀತಿಯ ಸಹಕಾರ ಸಂಘಗಳು ನೋಂದಣಿಗೆ ಬರುವಾಗ ಕನಿಷ್ಠ ಎಷ್ಟು ಜನ ಸದಸ್ಯರು ಇರಬೇಕು, ಕನಿಷ್ಠ ಎಷ್ಟು ಷೇರು ಬಂಡವಾಳ ಸಂಗ್ರಹಿಸಿರಬೇಕು ಮುಂತಾದ ಅಗತ್ಯಗಳನ್ನು ವಿವರಿಸಿ ನಿಬಂಧಕರ ಕಛೇರಿಯಿಂದ ಅನೇಕ ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಒಂದು ಸಹಕಾರ ಸಂಘದ ನೋಂದಣಿ ಕೋರಿ ನಿಬಂಧಕರ ಕಛೇರಿಗೆ ಪ್ರಸ್ತಾವನೆ ಬಂದಾಗ, ಅವರು ಕೆಳಕಂಡ ಅಂಶಗಳನ್ನು ಪರಿಶೀಲಿಸುತ್ತಾರೆ.

- ಅರ್ಜಿಯು ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಇದೆಯೇ?
- ನಿಗಧಿ ಪಡಿಸಿದ ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿದ್ದಾರೆಯೇ?
- ಉದ್ದೇಶಿತ ಉಪನಿಯಮಗಳಲ್ಲಿ ಯಾವುದಾದರೂ ಅವಕಾಶಗಳು ಕಾಯಿದೆ ಮತ್ತು ನಿಯಮಗಳಿಗೆ ವಿರೋಧವಾಗಿವೆಯೇ?
- ಉದ್ದೇಶಿತ ಸಂಘವು ಉತ್ತಮ ವ್ಯವಹಾರದ ಅಗತ್ಯಗಳನ್ನು ಪೂರೈಸುತ್ತದೆಯೇ?
- ಉದ್ದೇಶಿತ ಸಂಘವು ಆರ್ಥಿಕವಾಗಿ ಯಶಸ್ವಿ ಆಗುತ್ತದೆಯೇ? ಇತ್ಯಾದಿ

ಎಲ್ಲ ರೀತಿಯಿಂದಲೂ ಪ್ರಸ್ತಾವನೆ ಸರಿಯಿದ್ದರೆ ಆ ಸಂಘ ನೋಂದಣಿ ಆಗುತ್ತದೆ.ಇಲ್ಲವಾದರೆ ನೋಂದಣಿ ನಿರಾಕರಿಸಿ ನಿಬಂಧಕರು ಆದೇಶ ಹೊರಡಿಸುತ್ತಾರೆ.ಆ ಆದೇಶದಲ್ಲಿ ನೋಂದಣಿ ನಿರಾಕರಣೆಗೆ ಕಾರಣಗಳನ್ನು ನೀಡಿರುತ್ತಾರೆ.ನಿರಾಕರಣೆ ಆದೇಶವನ್ನು ಪ್ರಶ್ನಿಸಿ ನ್ಯಾಯ ಕೋರಿ ಸಂಘದ ಪ್ರವರ್ತಕರು ಮೇಲ್ಮನವಿ ಹೋಗಬಹುದು. ನೋಂದಣಿ ಅರ್ಜಿ ತಲುಪಿದ ಮೂರು ತಿಂಗಳ ಒಳಗಾಗಿ ನಿಬಂಧಕರು ನೋಂದಣಿ ಪ್ರಸ್ತಾವನೆಯನ್ನು ವಿಲೇವಾರಿ ಮಾಡಬೇಕು.ಈ ಅವಧಿಯೊಳಗೆ ನಿಬಂಧಕರು ಏನೂ ಕ್ರಮ ಕೈಗೊಳ್ಳದಿದ್ದಲ್ಲಿ ಸಂಘವು ನೋಂದಣಿಯಾಗಿದೆ ಎಂದು ಭಾವಿಸಲಾಗುತ್ತದೆ.

ಸಂಘವನ್ನು ನೋಂದಣಿ ಮಾಡಿದ್ದಕ್ಕಾಗಿ ನಿಬಂಧಕರು ನೋಂದಣಿ ದೃಢೀಕರಣ ಪತ್ರವನ್ನು ನೀಡುತ್ತಾರೆ.ಉಪನಿಯಮಗಳ ಕೊನೆಯಲ್ಲಿ ತಮ್ಮ ಸಹಿ ಮತ್ತು ಮುದ್ರೆ ಹಾಕುತ್ತಾರೆ.ನೋಂದಣಿ ಆಗುವುದರಿಂದ ಸಹಕಾರ ಸಂಘವು ನಿಗಮಿತ ನಿಕಾಯ (ಬಾಡಿ ಕಾರ್ಪೋರೆಟ್) ಆಗುತ್ತದೆ.ಇದರಿಂದಾಗಿ ತನ್ನ ಉದ್ದೇಶ ಸಾದನೆಗಾಗಿ ಎಲ್ಲ ಕಾನೂನು ವ್ಯವಹಾರಗಳನ್ನು ನಡೆಸಲು ಅದು

ಸಶಕ್ತವಾಗುತ್ತದೆ.ಸಹಕಾರಿ ಸಂಘವು ತನ್ನ ಹೆಸರನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಎದ್ದುಕಾಣುವಂತೆ ಬರೆದ ನಾಮಫಲಕ ಗಳನ್ನು ತನ್ನ ಕಛೇರಿ ಮತ್ತು ಶಾಖೆಗಳಲ್ಲಿ ಹಾಕಿರಬೇಕು.

ಸಂಘ ನೋಂದಣಿ ಆದ 30 ದಿನಗಳ ಒಳಗಾಗಿ ಸಂಘವು ತನ್ನ ಮೊದಲ ಮಹಾಸಭೆಯನ್ನು ನಡೆಸಬೇಕು.ಮುಖ್ಯ ಪ್ರವರ್ತಕರು ಇದನ್ನು ಕರೆಯುತ್ತಾರೆ. ಈ ಮೊದಲ ಮಹಾಸಭೆಯಲ್ಲಿ

- ನಿಬಂಧಕರಿಂದ ನೋಂದಣಿಯಾದ ಬೈಲಾಗಳನ್ನು ದಾಖಲಿಸುವುದು;
- ಸದಸ್ಯತ್ವ ಪಡೆದಿರುವವರ ದಾಖಲಾತಿ;
- ಆಡಳಿತ ಮಂಡಲಿ ಹಾಗೂ ಅಧ್ಯಕ್ಷ ಮುಂತಾದ ಪದಾಧಿಕಾರಿಗಳ ಚುನಾವಣೆ;
- ವಾರ್ಷಿಕ ಆಯವ್ಯಯದ ಅನುಮೋದನೆ;

ಮುಂತಾದ ಕಾರ್ಯಕಲಾಪಗಳನ್ನು ನಡೆಸಬೇಕು.

**ಉಪನಿಯಮಗಳು ಮತ್ತು ಉಪನಿಯಮಗಳ ತಿದ್ದುಪಡಿಗಳು (ಕಲಂ-12, ನಿಯಮ-6)**

ಪ್ರತಿ ಸಹಕಾರ ಸಂಘವು ತನ್ನ ಉದ್ದೇಶಗಳು, ಸದಸ್ಯತ್ವ, ಸಂಪನ್ಮೂಲಗಳು, ಆಡಳಿತ ಮುಂತಾದವುಗಳನ್ನು ಉಳ್ಳ ವಿವರಗಳನ್ನು ಸೂತ್ರೀಕರಿಸಿ ಉಪನಿಯಮಗಳನ್ನು ರಚಿಸಿಕೊಳ್ಳವುದು ಅಗತ್ಯ.ಸಂಘ ಸ್ಥಾಪಿತವದಾಗ ಈ ಉಪನಿಯಮಗಳು ನಿಬಂಧಕರಿಂದ ನೋಂದಣಿ ಆಗಿ ಅದು ಸಂಘದ ಸಂವಿಧಾನ ಆಗುತ್ತದೆ.

ಉಪನಿಯಮಗಳನ್ನು ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ರಚಿಸಬೇಕಾಗುತ್ತದೆ. ಉಪನಿಯಮಗಳಲ್ಲಿ ಯಾವುದು ಕಡ್ಡಾಯವಾಗಿ ಇರಬೇಕು ಮತ್ತು ಯಾವುದು ಸಂಘದ ವಿವೇಚನೆಗೆ ಬಿಟ್ಟಿದ್ದು ಎಂಬುದನ್ನು ನಿಯಮಗಳಲ್ಲಿ ವಿಧಿಸಲಾಗಿದೆ. ಉಪನಿಯಮಗಳಲ್ಲಿ ಕಡ್ಡಾಯವಾಗಿ ಇರಬೇಕಾದ ಅಂಶಗಳಲ್ಲಿ ಕೆಲವು ಕೆಳಗಿನಂತಿದೆ:

1. ಸಂಘದ ಹೆಸರು ಮತ್ತು ವಿಳಾಸ
2. ಅದರ ಕಾರ್ಯ ವ್ಯಾಪ್ತಿ
3. ಸಂಘದ ಉದ್ದೇಶಗಳು
4. ಸಂಪನ್ಮೂಲಗಳನ್ನು ಯಾವ ವಿಧದಿಂದ ಕ್ರೋಢೀಕರಿಸಲಾಗುತ್ತದೆ.
5. ಸದಸ್ಯರ ಜವಾಬ್ದಾರಿಯ ಸ್ವರೂಪ ಮತ್ತು ಗಾತ್ರ.
6. ಸಂಘದ ಸಂಪನ್ಮೂಲಗಳನ್ನು ಯಾವ ಉದ್ಧೇಶಗಳಿಗೆ ಬಳಸಲಾಗುತ್ತದೆ.
7. ಸದಸ್ಯರಾಗಲು ಅರ್ಹತೆಗಳು, ಅವರ ಪ್ರವೇಶದ ನಿಬಂಧನೆಗಳು, ಅವರ ಹಕ್ಕು ಮತ್ತು ಬಾಧ್ಯತೆಗಳು
8. ಸಭೆಗಳನ್ನು ಕರೆಯುವ ವಿಧಾನ
9. ಆಡಳಿತ ಮಂಡಳಿಯ ಸ್ವರೂಪ, ಗಾತ್ರ, ರಚನೆ ಹಾಗೂ ಅದರ ಕರ್ತವ್ಯಗಳು ಮತ್ತು ಅಧಿಕಾರಗಳು.
10. ಸಂಘದ ನೌಕರ ವರ್ಗದ ನೇಮಕಾತಿ, ತೆಗೆದುಹಾಕುವುದು, ಸೇವಾನಿಬಂಧನೆಗಳು, ಕರ್ತವ್ಯಗಳು ಮತ್ತು ಅಧಿಕಾರಗಳು.
11. ಲಾಭ ವಿಲೇವಾರಿ
12. ಲೆಕ್ಕಪತ್ರ ನಿರ್ವಹಣೆ ಹಾಗೂ ಆರ್ಥಿಕ ತಃಖ್ತೆಗಳ ತಯಾರಿಕೆ.
13. ಸಂಘದ ಚಟುವಟಿಕೆಗಳಿಗೆ ಅತ್ಯಗತ್ಯವಿರುವ ಅಂಶಗಳು; ಇತ್ಯಾದಿ

ಇದಲ್ಲದೆ ತನ್ನ ಉದ್ದೇಶಗಳ ಸಾಧನೆಗಾಗಿ ಅಗತ್ಯವಿರುವ ನಿಯಮಗಳ ಅವಕಾಶ (ಪ್ರಮಿಷನ್) ಗಳನ್ನು ಉಪನಿಯಮಗಳಲ್ಲಿ ಸೇರಿಸಬಹುದಾಗಿದೆ.

ಸಂಘವು ಕಾಲಕ್ಕೆ ತಕ್ಕಂತೆ ಮತ್ತು ತನ್ನ ಉದ್ದೇಶಗಳ ಸಾಧನೆಗಾಗಿ ಹಾಲಿ ಇರುವ ಉಪನಿಯಮ ಗಳನ್ನು ತಿದ್ದುಪಡಿಮಾಡಿಕೊಳ್ಳಬೇಕಾದ ಪ್ರಸಂಗಗಳು ಬರುತ್ತವೆ. ತಿದ್ದುಪಡಿಯ ವಿಧಾನ ಕೆಳಗಿನಂತಿದೆ.

- ತಿದ್ದುಪಡಿಯನ್ನು ಮಹಾಸಭೆಯಲ್ಲಿ ಮಾಡಬೇಕು.
- ಮಹಾಸಭೆಗೆ ನೀಡುವ ನೋಟೀಸಿನಲ್ಲಿ ಏನು ತಿದ್ದುಪಡಿ ಮಾಡಬೇಕಾಗಿದೆಯೋ ಆ ಅಂಶವನ್ನು ನಮೂದಿಸಿ ಅದಕ್ಕೆ ವಿವರವಾದ ಕಾರಣಗಳನ್ನು ನೀಡಬೇಕು.
- ಮಹಾಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ 2/3 ಭಾಗ ಸದಸ್ಯರು ತಿದ್ದುಪಡಿಗೆ ಒಪ್ಪಬೇಕು.

ಹೀಗೆ ಮಹಾ ಸಭೆಯು ಅಂಗೀಕರಿಸಿದ ತಿದ್ದುಪಡಿಯನ್ನು ಸೂಕ್ತ ಪ್ರಸ್ತಾವನೆಯ ಮೂಲಕ ನಿಬಂಧಕರಿಗೆ ನೋಂದಣಿಗಾಗಿ ಕಳುಹಿಸಬೇಕು. ಪ್ರಸ್ತಾವನೆಯ ತಯಾರಿಕೆಯ ವಿಧಾನವನ್ನು ನಿಯಮಗಳಲ್ಲಿ ವಿಧಿಸಲಾಗಿದೆ. ಮಹಾ ಸಭೆ ನಿರ್ಣಯವಾದ 60 ದಿನಗಳ ಒಳಗೆ ತಿದ್ದುಪಡಿ ಪ್ರಸ್ತಾವನೆಯನ್ನು ನಿಬಂಧಕರಿಗೆ ಕಳುಹಿಸಬೇಕು. ನಿಬಂಧಕರು ನೋಂದಣಿ ಮಾಡಿದ ನಂತರ ತಿದ್ದುಪಡಿ ಜಾರಿಗೆ ಬರುತ್ತದೆ.

ಪ್ರಸ್ತಾವನೆ ಸೇರಿದ ದಿನಾಂಕದಿಂದ 3 ತಿಂಗಳ ಒಳಗಾಗಿ ನಿಬಂಧಕರು ತಿದ್ದುಪಡಿಯನ್ನು ಅಂಗೀಕರಿಸಿ ಅಥವಾ ತಿರಸ್ಕರಿಸಿ ಆದೇಶ ನೀಡಬೇಕು.ತಿದ್ದುಪಡಿ ತಿರಸ್ಕೃತವಾದಾಗ ಸಂಘವು ಮೇಲ್ಮನವಿ ಸಲ್ಲಿಸಬಹುದು. ತಿದ್ದುಪಡಿ ನೋಂದಣಿ ಪ್ರಸ್ತಾವನೆ ತಲುಪಿದ 3 ತಿಂಗಳ ಒಳಗಾಗಿ ನಿಬಂಧಕರು ಏನೂ ಕ್ರಮ ಕೈಗೊಳ್ಳದಿದ್ದಲ್ಲಿ ತಿದ್ದುಪಡಿ ನೋಂದಣಿ ಆಗಿದೆ ಎಂದು ಭಾವಿತವಾಗುತ್ತದೆ.

ಸಂಘವು ತನ್ನ ಹೆಸರು, ವಿಳಾಸ, ಸದಸ್ಯರ ಜವಾಬ್ದಾರಿ ನಿಯಮಿತವೋ ಅಲ್ಲವೋ ಮುಂತಾದುವನ್ನು ಬದಲಾಯಿಸಲು ಮೇಲೆ ಹೇಳಿದ ರೀತಿಯ ತಿದ್ದುಪಡಿಯ ಮೂಲಕವೇ ಮಾಡಬೇಕು. ಆದರೆ ಜವಾಬ್ದಾರಿಯ (ನಿಯಮಿತ ಅಥವಾ ಅನಿಯಮಿತ) ಬಗ್ಗೆ ಸಂಬಂಧಿಸಿದ ತಿದ್ದುಪಡಿಗೆ ಮಾತ್ರ ಎಲ್ಲ ಸದಸ್ಯರ ಮತ್ತು ಎಲ್ಲ ಸಾಲಗಾರರ ಒಪ್ಪಿಗೆಯೂ ಬೇಕು ಅಥವಾ ಎಲ್ಲ ಸದಸ್ಯರ ಮತ್ತು ಎಲ್ಲ ಸಾಲಗಾರರ ತಗಾದೆಗಳನ್ನು ತೀರಿಸಿರಬೇಕು. ಒಂದು ಸಹಕಾರ ಸಂಘವು ತನ್ನ ಉಪನಿಯಮಗಳನ್ನು ನಿಬಂಧಕರು ನಿರ್ದೇಶಿಸಿದ ರೀತಿಯಲ್ಲಿ ಮಾಡಬೇಕು ಎಂದು ನಿಬಂಧಕರು ಆದೇಶ ನೀಡಲು 2014ರ ಕಾಯಿದೆ ತಿದ್ದುಪಡಿಯಲ್ಲಿ ಅವಕಾಶ.

ಮುಂದುವರೆಯುವುದು...